ನಾದಬಿಂದು

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
7, ಲ್ಯಾಂಗ್ ಫೋರ್ಡ್ ರೋಡ್,
ಬೆಂಗಳೂರು-25.

ನಾ ದ ಬಿ ಂ ದು

'ಶ್ರೀ ಬುದ್ಧದೇವ ಪಾದಾರ್ಪಣಮಸ್ತು'

ಭಗವನ್ ಭೂತಭವ್ಯೇಶ
ನ ಜಾನೇ ಹಿತಮಾತ್ಮನಃ ।
ತ್ವಮೇವ ಸಂಚಿಂತ್ಯ ವಿಭೋ
ಹಿತಂ ಮೇ ದಾತುಮರ್ಹಸಿ ॥

ಪ್ರಥಮ ಮುದ್ರಣ ೧೯೭೧

ಬೆಲೆ : ಆರು ರೂಪಾಯಿ

ಮುದ್ರಕರು :
ಸಂಯುಕ್ತ ಕರ್ನಾಟಕ (ಜಾಬ್) ಪ್ರೆಸ್, ಬೆಂಗಳೂರು–೨೫.

ಪರಿವಿಡಿ

ನಾದ ಬಿಂದು

ವಿಶ್ವಮಾತೆ

ಓಂ

ಅಸತೋ ಮಾ ಸದ್ಗಮಯ |
ತಮಸೋ ಮಾ ಜ್ಯೋತಿರ್ಗಮಯ |
ಮೃತ್ಯೋರ್ಮಾಽಮೃತಂಗಮಯ ||
ಓಂ ಶಾಂತಿಃ ಶಾಂತಿಃ ಶಾಂತಿಃ

ಹೇ ದೇವಿ ಅಕ್ಷರೇ ಅರೂಪೇ
ಸಕಲ ವಿದ್ಯಾ ಮಾತೃರೂಪಿಣೀ
ಚಿದಾನಂದಕರೀ ಚಿನ್ಮಯೀ
ಸರ್ವ ಕಲಾ ಕ್ಷೇತ್ರಧಾರಿಣೀ
ನಮೋ ನಮೋ ಸೃಷ್ಟಿ ಮಾತೆ !
ನಮೋ ನಮೋ ತಮೋಹಾರಿಣೀ !

ಬ್ರಹ್ಮ ಹೃದಯ ಕಮಲ ಸಂಭವೆ
ಸರ್ವ ಜನ ಶ್ರೇಷ್ಠ ಪ್ರಾಣಮೋದಿನೀ
ನಿಖಿಲ ಜಗಜ್ಜನನೀ ಕರುಣಾಕರೀ
ಭವ್ಯ ಭಾಮಿನೀ ಶಾರದೆ ವರದೆ
ನಮೋ ನಮೋ ವಿಶ್ವಮಾತೆ !
ನಮೋ ನಮೋ ಕಾವ್ಯರೂಪಿಣಿ !

ಕ್ಷೀರಾಬ್ಧಿ

ಪ್ರಕೃತಿ ಮಹಾ ಮಾತೆಯ ವರ
ಉಜ್ವಲ ಉಡಿಯಲ್ಲಿ
ಮಲೆನಾಡಿನ ವರ್ಣರಂಜಿತ
ಪುಣ್ಯಾಟವಿಯಲ್ಲಿ
ಹಚ್ಚನೆಯ ಹಸುರದು ಹಬ್ಬಿ
ತಂಪು ಹೆಪ್ಪುಗಟ್ಟಿ
ಹೊಂಬಿಸಿಲ ಹೊಂಗೋಲುಗಳು
ಎಳೆ ಎಳೆಯಾಗಿ ಮಿಂಚಿ
ಹಸುರಿನ ಬೃಹದ್ ಗಡಲಿಗೆ
ಹೊಂಬಣ್ಣದ ಬಳಿಯೆ
ಕೋಟಿ ಕೋಟಿ ಕೊರಳುಗಳಲಿ
ಪಕ್ಷಿಗಾನ ಹೊಮ್ಮಿ
ಮಧುರವಾರ್ಧಿವೀಚಿ ಹರಡಿ
ನಿರ್ಜನ ಸುಖ ಸಂಗ
ಶೀತಲ ಶಾಂತಿಯು ಸಂಪದಕೆ
ಅಡಿಗಲ್ಲನ್ನಿಡೆ
ಜಳಜಳ ಹರಿಯಿತು ಕಾವ್ಯರಸ
ಕ್ಷೀರಾಬ್ಧಿ !

ಶ್ರೀ ರಾಮಕೃಷ್ಣ ಪರಮಹಂಸ

ವಂಗಮಾತೆಯ ತೊಟ್ಟಿಲ ಶಿಶುವು ತಾನಾಗಿ
ದಕ್ಷಿಣೇಶ್ವರ ದೇಗುಲ ಪೂಜಾರಿ ತಾನಪ್ಪಿ
ಭಾರತ ವ್ಯೋಮದ ನೂತನ ಗ್ರಹದೊಲು ಮಿನುಗಿ
ಚಿರಂಜೀವಿಯಾದೆ ಹೇ ವರಯುಗದವತಾರ !

ಐಹಿಕ ವ್ಯಾಪಾರದ ವ್ಯಾಮೋಹದಲಿ ಮೈಮರೆತು
ಆತ್ಮ ವಿನಾಶದ ಹಾದಿಯ ತುಳಿದು ನರಳುತಿಹ
ಜನಾಂಬೋಧಿಗೆ ಮರ್ತ್ಯರ ಮನಮರುಗಿ ಉಜ್ವಲ
ಕೈದೀವಿಗೆಯಾದೆ ಹೇ ವರಯುಗದವತಾರ !

ಜಡಮತಿಯ ರುಂದ್ರ ಕಾನನದಲಿ ಸಂಚರಿಸಿ
ಘನ ನಿಬಿಡ ಮುಳ್ಳುಕಂಟಿಗಳ ವ್ಯಾಪ್ತಿಯಲಿ
ಸಂಜನಿಸಿದ ನಂಜನ್ನೀಂಟಿದೆ ಜ್ಞಾನ ದೀಪ್ತಿಯಿಂ
ವಜ್ರ ಮನೋಭವ ಹೇ ವರಯುಗದವತಾರ !

ಸತೀ ಶಾರದಾದೇವಿಯಂ ಗೌರವದಿ ಪೂಜಿಸಿ
ಏರಿದೆ ಏಕೈಕ ಪರಮ ಸದ್ಗುರು ಪುಣ್ಯಪದಕೆ
ಕಾಳಿಯ ವರಭಕುತ ಭಾರತ ಸೀಮಾಪುರುಷ
ಗುರು ಸಾರ್ವಭೌಮ ಹೇ ವರಯುಗದವತಾರ !

ಓ ಘನ ಶ್ಯಾಮ ಸುಂದರ !

ತಲೆ ಬಾಗಿಲಲಿ ನಿಂದು ಕಾದಿರುವೆ ನಿನಗೆಂದು
ತಂಬಿಗೆ ನೀರನಾಂತು ಎಲ್ಲಿರುವೆ ಬಾ ದೊರೆಯೆ !

ದುಃಖತಪ್ತ ಮನದಿ ಬೇಡುತಿಹೆ ಸೆರಗೊಡ್ಡಿ
ಸಡ್ಡೆಯಿಂದ ನಲಿನಲಿಯುತ ಬಾ ದೇವೇಶನೆ !

ಹಗಲಿರುಳೆನ್ನದೆ ನಿತ್ಯ ನೂತನ ನೋಂಪಿನಲಿ
ಉರುಳಿತು ಹೊತ್ತು ನಿನ್ನ ಧ್ಯಾನದೇಕಾಂತದಲಿ.

ಇನ್ನು ತಡಮಾಡದಿರು ಎನ್ನಯ್ಯ ಕರುಣಾಳು !
ಹಿರಿತನವ ತೊರೆದು ಬಾರಯ್ಯ ಯಶೋನಂದನ !

ಉಳ್ಳವರಿಕ್ಕಲಿ ಹೊನ್ನಿನಾ ಹರಿವಾಣದಲಿ
ನಾನೋಂತಿಹೆ ಕುಡಿಕೆಯಲಿ ದಧಿಕ್ಷೀರವಂ

ಓಡಿ ಬಾರ ! ಕೃಪೆದೋರು ಎನ್ನರಸ ! ವರುಷ
ವರುಷಗಳು ಸಂದುವು ನಿನ್ನಯ ನಿರೀಕ್ಷೆಯಲಿ

ಓ ಘನ ಶ್ಯಾಮ ಸುಂದರ !

ಓ ಗಾಂಧೀ ಮಹಾತ್ಮಾ!

ಕಡು ಕಷ್ಟದಿಂ ನೀ ಸೆಣಸಿ ಪಡೆದಿರಲು
ಸ್ವಾತಂತ್ರ್ಯಂ ಆತ್ಮ ಸಂತೋಷದಿಂದ
ಇನ್ನಿನಿಸು ದಿನ ಅಲ್ತಲ್ತು, ಇನ್ನಿನಿಸು ಕಾಲ
ಬದುಕ ಬೇಕಿತ್ತಲ್ಲೈ ಓ ದಿವ್ಯ ಚೇತನ!

ದುರುಳಂ ಗುಂಡಿಕ್ಕಿದನೆ ನಿನ್ನ ಹೂವೆದೆಗೆ
ಅರ್ಥಹೀನ ವ್ಯವಹಾರದಲಿ ತಾ ಸಿಲ್ಕಿ!
ಬಡವೆಯಾದಳಿಂದು ಅಖಿಲ ಭಾರತ ಜನನಿ
ಮಿಂಚಿನ ಸಂಚಿನಲಿ ನಡೆದ ಪುತ್ರ ಮರಣದಿಂ.

ಜಾತಿದ್ವೇಷ ಕಿಚ್ಚೆದ್ದು ಧಗಧಗಿಸಿ ಹೊತ್ತಿ
ಕೆನ್ನೀರಂ ಬಸಿದು ಭಾರತಿ ಬಡವಾಗಿರಲ್
ಸಂತವಿಪ ಸುಪುತ್ರ ಕಣ್ಮರೆಯಪ್ಪಿ ತಾ
ಸಗ್ಗಕೆ ಸಾರ್ದನೆ ಸ್ವಾತಂತ್ರ್ಯ ಘೋಷಿಸೆ?!

ಭಾರತ ಹೃತ್ಕಮಲದಲಿ ಸ್ವಾತಂತ್ರ್ಯ
ಸಂಘವನು ಮೂಡಿಸಿ ಜನಮತಿಯಂ ಸೆಳೆದು
ಚಳವಳಿ ಹೂಡಿ ಗಳಿಸಿದೆ ಜನ ಶಕ್ತಿಯಂ
ಮೇಣ್ ಅಕಳಂಕ ಅಖಿಲ ಜಗತ್ಪ್ರೀತಿ!

ಓ ಸ್ವತಂತ್ರ ಭಾರತ ಪರಮಯೋಗಿ!
ಇರಲಿ ನಿನ್ನಾತ್ಮ ಕಾಂತಿ ಚಿರ ಶಾಂತಿಯಲಿ
ಮೇಣೆಮ್ಮ ಪರಿಸರದಲಿ ನಡೆಸಲ್ ನಿಚ್ಚ
ನವಭಕ್ತಿಯಿಂ ನೇಮದ ದಿಟ್ಟ ಹಾದಿಯಲಿ
ಓ ಗಾಂಧೀ ಮಹಾತ್ಮಾ!

ಶ್ರೀ ಸದ್ಗುರುವಿಗೆ ನಮ್ರ ನಮನ

ಬಾಳ ಬನದ ಕಳೆಯ ಕಿತ್ತು
ನೀರೊರೆದು ಕಾಲಕಾಲಕೆ
ನನ್ನಿಯ ಘೋಷಣೆ ಮಾಡಿ
ನೊಂದ ಮನದ ಕಳ್ತಳೆಯಂ ಕಳೆದ
ಪರಮ ಗುರುವಿಗೆ ನಮ್ರ ನಮನ !

ದುಷ್ಟ ಶಕ್ತಿಯ ಕತ್ತರಿಯಲಿ
ಸಿಕ್ಕಿ ನರಳಿ ಕಂಬನಿ ಮಿಡಿದ
ಮಡದಿಯ ಸಂತೈಸಲು
ದೂರದಿಂ ಗಮಿಸಿದ ಅನನ್ಯ
ಅನುಪಮ ಗುರುವಿಗೆ ನಮ್ರ ನಮನ !

ಕ್ರೂರಬಿಧಿಯ ವಜ್ರ ಬಂಧನ
ಅಂತಃಶತ್ರುಗಳ ನಿತ್ಯ ಕದನ
ತೀವ್ರ ಕಕ್ಕುಲತೆಯಂ
ತುಂಬಿ ಮನಕೆ ಮರುಗಿ ಸಲಹಿದ
ಶ್ರೀ ಸದ್ಗುರುವಿಗೆ ನಮ್ರ ನಮನ !

ಶ್ರೀ ಶಾರದಾ ದೇವಿ

ಶಾರದಾದೇವಿ ನಿರ್ಮಲ ಮಾನಸ ಮಂದಿರೆ
ಶರಣು ಶರಣು ಶರಣು ತವ ಚರಣಾಂಬೋಧಿಗಂ !

ಶ್ರೀರಾಮಕೃಷ್ಣ ಹೃದಯ ಕಾವ್ಯ ಸಂಪ್ರೀತೆ !
ಗುರುಮಾನಸ ಭಕ್ತಿವೇದಿ ಪರಮ ವಿಹಾರಿಣಿ !

ದಿವ್ಯ ಸಂಯಮ ಮೂರ್ತಿ ಮಹಿಮಾಮಯ ಜ್ಯೋತಿ !
ನಿತ್ಯ ಭಕ್ತಿಲೋಲೆ ಕಾಳಿಮಾ ತಪಶ್ಶೀಲೆ !

ವಿಶಯದ ಹುಚ್ಚು ಹೊಳೆಯಂ ದಿಟ್ಟತನದಿ ದಾಂಟಿ
ಭಾವ ಸಮಾಧಿಯಲಿ ಧ್ಯಾನಾಮೃತವೀಂಟಿ

ಭಾರತ ಸೇವಾ ಶ್ರೇಣಿಯಲಿ ವಿರಾಜಿಸಿ
ನಾರಿಯರ್ಗೆ ಮೇಲ್ಪಂಕ್ತಿಯಾಗಿಹೆ ದೇವಿ !
ಶರಣೆಂಬೆ ತವಚರಣಾಂಬೋಧಿಗಂ !

ವರ್ಣ ಸಾಕ್ಷಾತ್ಕಾರ !

ನವೋದ್ಯಾನದ ಸಸ್ಯ ಶ್ಯಾಮಲ ವನಧಾತ್ರಿ !
ಪುಷ್ಪಗಂಧಿತ ಸುಂದರ ನವರಾತ್ರಿ !

ಇರುಳೇಣಿಯ ಧಿಮಿ ಧಿಮಿ ಇಳಿದು
ಕೋಟಿ ಕೋಟಿ ಕಾಳ ತೆರೆ ಹರಿದು
ನುಗ್ಗು ತ್ತಾತಶಾ ಮಂಟಪ ವೇದಿಕೆಗೆ
ಚಂದದಿಂ ನುಗ್ಗಿ ಬರೆ ಮುಂಬೆಳಕು
ಎಂದಿನೊಲು ಸಡಗರದಿಂ ತೆರೆದೆ ಮುಂಬಾಗಿಲು !
ಸುಮಮಯವೆತ್ತ ಹಸುರ್ದಳಿರು
ಸುಂದರ ತೇರಿನೊಲು ಶೃಂಗರಿಸಿ
ಸುವರ್ಣ ಸಾಕ್ಷಾತ್ಕಾರದ ದಿವ್ಯಾಘಾತಕೆ ಸಿಲ್ಕಿ
ಮರವಟ್ಟಿನಲ್ಲಿ ಅಸದೃಶ–ಅವರ್ಣನೀಯ
ರಸಾನಂದ ವಾರ್ಧಿಯಂ ಜೊಕ್ಕು !
ಮೂಡಿ ಬಹ ತರಣಿಯ ಲೀಲಾರಶ್ಮಿ
ಮಂದ ಮಂದಾನಿಲನ ಶೀತಲಾಕ್ಷಣಿ
ಕಂಪಿನ ಹೊಳೆ – ತಂಪಿನ ಮಳೆ
ಸುಂದರ ಪುಷ್ಪ ಸುಶೋಭಿತ
ಶಾಂತಿ ಪರಿಮಳವೇಷ್ಟಿತ
ಉದ್ಯಾನದಸುರ್ಗಡಲ ಮಧ್ಯೆ
ಮೈದೋರಿದಳಪ್ಸರ ಮಾತೆ !
ಆಸ್ವಾದನೆಯ ತೋಳುಗಳಲಿ
ಆಕರ್ಷಣೆಯ ಆಲಿಂಗನೆ ನೀಡಿ
ಶ್ರದ್ಧಾ ಧೈರ್ಯಗಳಲಿ ಕೃಪೆಯಂ ಬಿಂಬಿಸಿ
ಬಾಳಂ ತುಂಬಿಸೆ ನಂಬುಗೆಯಲಿ

ಅರೆಯರಳಿದ ಶ್ರೀ ಪುಷ್ಪರಾಜಿ
ತಾನಾದುದು ವರ್ಣ ಸಾಕ್ಷಾತ್ಕಾರ !
ದುಕ್ಕದಿ ಸಿಲ್ಕಿಹ ಪುತ್ರಿಯನನುಗ್ರಹಿಸಲ್
ಅವತರಿತ ಶ್ರೀ ಮಾತೆಯಂ
ನೋಡುತ ನೋಡುತ ಮರವಟ್ಟು
ಆನಂದ ಸುಧೆಯಲಿ ಮುಳುಗಿ
ತಾಯೊಲ್ಮೆಯ ವಿನಮ್ರ ಭಾವದಲಿ
ಮೈದುಂಬಿ ತಲೆ ಮಣಿದೆಂದೆ
" ಇಗೋ ನಮನ ! ಹೇ ಮಮ ಜನನಿ !
ಈ ಭವ ಸಾಗರದಿ ನೀನೆನಗೆ ದಿವ್ಯ ರಕ್ಷೆ ! "

ಸ್ವಾಮಿ ವಿವೇಕಾನಂದ

ಅಸ್ವತಂತ್ರ ಭಾರತದ ನೀಲಿಯ ನಭದಲಿ
ತುಂಬಿರೆ ಕಾಳ ಮೇಘ ಘನ ತಿಮಿರ ಛಾಯೆ,
ಜನ ಸಾಂದ್ರತೆ ಕಂಗೆಟ್ಟು, ಮಲಗಿತ್ತು ಬೆದರಿ
ಗಾಣದೆತ್ತಿನ ದುಡಿತದಲಿ ತಾ ಸೋತು ಸೊರಗಿ!

ಭವದ ಮಾಯೆ ಹರಿಸೆ ಉಜ್ವಲ ಜ್ಯೋತಿರ್ಧಾರಿ
ನೀನಾದೆ ನರೇಂದ್ರ ನಾಮಗನುಗುಣಮಪ್ಪಿ!
ಮತಿಮತಿಯಲಿ ಬಿತ್ತಿ ಬೆಳೆದೆ ಕೆಚ್ಚಿನ ಮಹಾ
ಕಿಡಿಯಂ ದೇಶವಿದೇಶಗಳ ವ್ಯಾಪ್ತಿಯಲಿ!

ವಿಶ್ವವಿದ್ಯಾಲಯದ ಮೂಸೆಯಲಿ ಪೊರಮಟ್ಟು
ದಕ್ಷಿಣೇಶ್ವರ ಗುರುದೇವ ದಿವ್ಯ ಜ್ಞಾನಾಗ್ನಿ
ಕುಂಡದೊಳ್ ಮುಳುಗಿ ಯೋಗವಿದ್ಯೆಯನರಿತು
ಭಾರತ ಗಗನದಲಿ ರಂಜಿಸಿದೆ ಉದಯರವಿಯೊಲ್ !

ಹಿಂದು ಮುಸಲ್ಮಾನ ಕ್ರೈಸ್ತ ಮತದ ಮೇಣೆಲ್ಲ
ಧರ್ಮಗಳ ಪರಮಾತ್ಮನೇಕನೆಂಬುದ ನೀನು
ಅರುಹಿದೆ ಜೋಂಪಿಸುವ ಜಂತ್ರಿತ ಜಡಮತಿಗಂ
ಬಾಯಾರಿದಂಗೆ ಎಳೆನೀರ ತೋರಿದವೋಲ್ !

ವಿಶ್ವಾತ್ಮ, ವಿವೇಕಾನಂದ ! ಪೇರು ಮಹಿಮನೆ !
ರುಂದ್ರ ಜನವಾರ್ಧಿಗೆ ಅಮೃತಾತ್ಮಭಾವಂ
ಬೋಧಿಸಿ ಧೀಶಕ್ತಿಯಂ ಕೊನರಿಸಿ ಕಾಪಿಡು
ಮೇಣ್ ಭಕ್ತರ ಆತ್ಮಶಕ್ತಿಯೆ ನೀನಾಗು !

ಬೆಳುದಿಂಗಳ ಅಮೃತ ಲೀಲೆ!

ಬೈಗಿನ ಬಾನಿನ ನೀಲಿಯಲಿ
ಬೆಳುದಿಂಗಳ ಅಮೃತ ಲೀಲೆ!

ಮುಗಿಲಿನಲಿ ಭುವಿಯಲಿ ರಜತ
ಜಾಲದಿ ಮುಗುಳ್ನಗುವ ಸೂಸಿ

ಮಿನುಮಿನುಗುತಿಹ ಕೋಟಿ ಕೋಟಿ
ಮಿಂಚಿನ ಸೊಡರ ಮೊಗಸಿರಿಯಂ

ಬಾಡಿಸಿ, ನರಕೃತ ಕಲೆಯಂ
ತೆಗಳಿ, ನಿರಾಶಾವಾದಿಗೆ

ಆಶೆಯನುಣಿಸಿ ನಲಿಯುತಲಿದೆ
ವರ ರಾಕಾ ಶಶಾಂಕ ರೋಚಿ!

ಅಹಃ! ಏಂ ಸೊಗಮೋ ಎಲ್ಲೆಡೆ
ಪರಿದಿಹ ಚಂದಿರ ಬಂಧುರ

ಲೀಲೆ! ಇಂತು ಪರ್ವಿದ ಮಹಿಮೆ
ಸ್ವಪ್ನವೊ ಸುಷುಪ್ತಿಯೊ ಹೇಳಾ
ಓ ಅಜಾತವಾದಿ!

ತ್ರಿಭುವನ ಸತ್ಯಸೌಂದರ್ಯ

ಸಿರಿದೊರೆಯೆ! ಬಾ ಹೊರಗೆ ಸುಖಭೋಗ
ಬದಿಗೊತ್ತಿ ತಲ್ಲೀನನಾಗು ದಿವ್ಯ
ತ್ರಿಭುವನ ಸತ್ಯಸೌಂದರ್ಯದಲಿ!
ರವಿ ಗಿರಿ ಸರಿದ್ವರೆ ಶಶಿ ತಾರಾಳಿ

ಗಗನ ಜೀಮೂತ ಪರಿವಾರಂ ಮಿಗೆ
ಪೆರ್ಚಿರಲ್ ವನದೈಸಿರಿ ಹೇಮಂತ
ವೈಯ್ಯಾರದಿ ನವೋದಿತ ಸೌಂದರ್ಯ
ಸತ್ಯ ಪಥದ ಪರಮ ಸರಳ ಲೀಲೆ!

ಶತಕೋಟಿ ಪಕ್ಷಿ ಮುಖರೀಕೃತ
ಗೀತ ವಸಂತಂ ಪಸರಿಪುದು ವಿಶ್ವ
ದರ್ಶನದಿ ವರಕವಿಯ ದಿವ್ಯವಾಣಿ!
ಧ್ಯಾನಲಯದಿ ಕಲೆಯ ಮಿಂಚುಣದವಗೆ

ಮುಕ್ತಿಯಿಲ್ಲೈ ಈ ಭವದಿ. ಅಹಹಾ!
ನಿಶಾಂತ ಸಮಯದಾ ಪ್ರಶಾಂತತರ
ಶುಭ ಕಾಂತಿಯಲಿ ರಂಜಿಪುದು ಎದೆಯ
ಗವಿದೇಗುಲಂ! ಅರಿಯದಿರೆ ನಿನ್ನಂ

ಇಹಪರ ಶೂನ್ಯ! ಮತಿ ಭಾವವೆ ಶೂನ್ಯ!
ಆ ದೇವರ ದೇವನೆ ಶೂನ್ಯ ಕಣಾ!

ಮಿತ್ರನಿಗೆ–

ಓ ಬಾರ !
ಓಡೋಡಿ ಬಾರ !
ಹೇ ಮಿತ್ರ ! ಇನ್ನು ಸಾಕು ಮಾಡು
ಈ ಸಾರ್ವಭೌಮಿಕ ಚಿನ್ನ ತೇರ ಚಲನೆ !
ವರುಷ ವರುಷಗಳಿಂದೆ ಕಾದಿರ್ದ
ಹರುಷ ಇಂದು ಕಟ್ಟೆಯೊಡೆದಿದೆ ;
ಕವಿ ಮನೋದ್ಯಾನ ನೆರೆಯುಕ್ಕಿ
ಕೃಷಿಯಜ್ಞದೊಳುದಿಸಿದೆ ಈ ಪೂವಪ್ಪಿ !

ನೀಲ ಕಮಲಿನಿಯಲಿ ಅರಳ್ದ
ಬೆಳ್ದಾವರೆಯಂ ನಾಚಿಸುವವೊಲ್
ಬೆಳ್ಳಿಯ ಸ್ವಚ್ಛ ಶಿಶು ಬಾಯ್ದೆರೆವವೊಲ್
ಶಾಂತಿಧಾಮದ ಮುಗ್ಧ ದುಗ್ಧ ಮಗುವಿನೊಲ್
ಅರಳುತಿದೆ ತ್ರಿಲೋಕದ ಮಹಿಮೆಯೊಲ್
ಸ್ಟಾರ್ ಆಫ್ ಬೆತ್ಲೆಹೆಮ್ !

ಹಸಿರು ಎಲೆಯ ತುದಿಯಲಿ
ವರುಷಕ್ಕೊಮ್ಮೆ ಮೊಗ್ಗು ಮೂಡಿ,
ಮಧ್ಯ ರಾತ್ರಿಯ ಶಾಂತಿಯಲರಳಿ,
ಶುಭ್ರ ಧವಳಿಮಾ ಕೀರುತಿ ಬೆಳಗಿ,
ಸುಗಂಧಿತ ಗಂಧವಂ ಪೂಸಿ,
ಅರಳುತಿದೆ ಮನಮೋಹಕ ಶೈಲಿಯಲಿ !

ಜೆಣ್ಣೆ ವೃದುಪ ಎರವು ಪಡೆದು
ಹಂಸತಲ್ಪ ಸುಖದೈಸಿರಿಯ ಪೊಣ್ಮೆ
ವಸಂತ ವೈಖರಿಯಲಿ ನಳನಳಿಸಿ
ಮಲ್ಲಿಕಾ ಕವಿತಾ ಸಾರವ ಬಸಿದು
ಅರೆಯರಳಿ ಮನಮೋಹಿಸುತಿದೆ
ಸ್ಟಾರ್ ಆಫ್ ಬೆತ್ಲೆಹೆಮ್ !

ಓ ಬಾರ !
ಓಡೋಡಿ ಬಾರ !
ಮುಂಬೆಳಕು ಮೂಡುವ ಮುನ್ನ
ನೀ ನೋಡಿ ಕೈಮುಗಿಯೆ ಬಾರ !
(ಹಾ! ಬೆಳಕು ಮೂಡೆ ಕಮರುವುದಲಾ !)
ಪುಷ್ಪ ಲೋಕದಿ ಈಶ್ವರ ಸಾಕ್ಷಾತ್ಕಾರ !
ಜಗದೊಡೆಯನ ಸಿರಿಮುಡಿ ಇಲ್ಲಿದೆ !
ನಾರಾಯಣನ ವೈಕುಂಠವಿದೆ ಇಲ್ಲಿ !
ಸರಸತಿಯ ವಿದ್ಯಾವಿನೋದವಿದೆ ಇಲ್ಲಿ !
ಮನಮುಟ್ಟಿ ನೋಡಿ ಕೈಮುಗಿ ಬಾರ !

ಶೀತಲ ಶಾಂತಿಯ ಚಳಿ ಕದಿರಿಂಪಿನಲಿ
ಹೂಗಂಪಿನ ಸೊಂಪಿನಲಿ ಮೈಮನ ಮುಳುಗಿ
ನೋಡುತ ನೋಡುತ ನೋಡುತಲಾನು
ಮೂರ್ತಿಮತ್ತಾಗೆ ಜಗಮರೆತು
ದಲ ದಲ ದಲ ದಲ ದಲ ದಲ
ಅರಳುತಿತ್ತು ಧವಳ ಪುಷ್ಪದಳ.
ಇಂತೆ ಅರಳಲೆನ್ನಯ ಬಾಳು
ದಲ ದಲ ದಲ ದಲ ದಲ ದಲ....!

ಇಂದಿರೆ

ಇಂದಿರೆ ಚಂದಿರೆ ಸ್ವರ್ಣ ಮನ ಮಂದಿರೆ!
ನಿರ್ಮಲ ಹೃತ್ಕಮಲ ಕುಂಡಲ ಧರೆ!

ನೆಲಸುಗೆ ನಿನ್ನ ವಕ್ಷದೊಳ್ ಅಖಿಲ
ಸೋದರಿಯರ ಕ್ಷೇಮಾಭ್ಯುದಯಂ!
ಕಂಕಣ ಬಲದ ತೆರೆಮರೆಯಲಿ ಹರಿವ
ಕಂಬನಿ ಕಡಲ ವಾರ್ಧಿಯಂ ಗಮನಿಸಿ
ಉದ್ಧರಿಸು ಕಾರುಣ್ಯ ಕಟಾಕ್ಷದಿಂ!
ಮುಗ್ಧ ಸ್ತ್ರೀಜನ ಕುಲ ಕೋಟಿಗಂ
ಸಕಲ ಕ್ಷೇತ್ರದಲೀಯು ಸಮಪಾಲು
ಆರ್ಥಿಕ ವೈಯ್ಯಕ್ತಿಕ ಸ್ವಾತಂತ್ರ್ಯ
ಸಮಪಾತ್ರದ ಸಹಯೋಗ ಜೀವನಂ!
ಬೆಳಗಲಿ ಭಾರತ ಸ್ವಾತಂತ್ರ್ಯ ಜ್ಯೋತಿ
ವರ ನಾರೀಜನ ಹೃದಯ ದೀಪ್ತಿಯಿಂ!

ಇಂದಿರೆ ಚಂದಿರೆ ಸ್ವರ್ಣಮನ ಮಂದಿರೆ!
ನಿರ್ಮಲ ಹೃತ್ಕಮಲ ಕುಂಡಲಧರೆ!

ಹಿರೋಶಿಮ *

ಹಾ ! ಎಂದೊರಲಿತು ಕಡು ಸಂಕಟದಿಂ Hiroshima !
        ಸಹಸ್ರ ಸಿಡಿಲ್ಗಳೊಂದಾಗಿ ಸಿಡಿವಂದದಿ ಸಿಡಿಯೆ
ಮುಂಜಾನೆ ಅಮೆರಿಕೆಯ ಹೃತ್‌ಹೀನ ಅಣುಬಾಂಬು
        ತಥ್ಯರಹಿತ ವ್ಯವಹಾರದಲಿ ಸಿಲ್ಕಿ ಖತಿಗೊಂಡು !

ಸಹಸ್ರ ಸಹಸ್ರ ಅಲ್ತಲ್ತು, ಲಕ್ಷ ಲಕ್ಷ ಲಕ್ಷ
        ಜೀವಾಜೀವಿಗಳ್ ಮಿಲಿಮಿಲಿ ಒದ್ದಾಡುತಲಿ
ಅಸುವ ನೀಗಿದುವು. ಹಾ ! ಎಂದೊರಲುತಿರೆ ಜಗ
        ನಿಮಿಷಾರ್ಧದಿ ನೆಲಸಮವಾಯ್ತು Hiroshima !

ಪ್ರೇತಪಿಶಾಚಂಗಳಿಗೆ ಸಹಯೋಗವಾದುದಲ್ಲಿ
        ಬುದ್ಧಿಜೀವಿಗಳ ಶತ ಸಹಸ್ರ ಆತ್ಮ ಸಮೂಹಗಳ್ !
ಚಲನ ಚಿತ್ರದಂದದಿ ಮಿಂಚಿ ಮಾಯವಾಯ್ತಲಾ
        ಮಾನವ ಲೋಕದಲಿ ಈರ್ಷ್ಯಾ ಮೂಕವಾಯೆ !

ದಿನ ಹಲವಳಿದರೂ ಸುಳಿಯುತಿರ್ದುವಲ್ಲಲ್ಲಿ
        ಮೌನ ಶೋಕದಿಂದಲಿ ಅಮಿತ ಮಾನವ ಛಾಯೆ !
ಗಂಟೆ ಮೊಳಗಿದ ಬಳಿಕ ಅಲೆವ ರವದಂದದಲಿ
        ಬಾಳ್ಮುಗಿವ ಮುನ್ನ ಮುಡಿದವರ ಆ ಮಹಾಮರಣ !

---

* ೬-೮-೧೯೪೫ ಜಪಾನಿನ ಹಿರೋಶಿಮದ ಮೇಲೆ ಅಮೇರಿಕೆಯು ಅಣುಬಾಂಬು ಹಾಕಿತು.

ಅರ್ಥವಿಲ್ಲದಾ ವ್ಯರ್ಥ

ಸಂದುದೋ ದಿವ್ಯಾರ್ಥ ಶತಮಾನಂ!
ಹೇಳ ಹೆಸರಿಲ್ಲದೊಲು ಕರಗಿ!
ಮಸಿ ಮುಸುರೆ ಬೆಂಕಿ ಹೊಗೆಯಾ
ಕರ್ಮಕಾಂಡದಲಿ ಕಟುವೇದನೆಯು
ಚಿರಸ್ಥಿತಿಯಲಿ ಕಳೆದುದಚ್ಚರಿ ಪಡುವವೋಲ್!
ಆನೆವಾಗಿಲು ಮುಚ್ಚಿರಲ್ ಭದ್ರಂ
ವಿದ್ಯೆಬುದ್ಧಿ ಕಂಡರಿಯದಾ ನತದೃಷ್ಟೆ ಕಣಾ!
ಸ್ವತಃ ಕಲಿಯುವೆನೆನೆ ಹೊತ್ತಗೆಯಿಲ್ಲ;
ಕೊಳ್ಳುವೆನೆನೆ ರೊಕ್ಕಮಿಲ್ಲ;
ಕೇಳುವೆನೆನೆ ಕರುಣಿಸುವವರದಾರು?
ಧೂರ್ತ ಜೀವನ ಪಥದಿ ಹೆಣ್ಣದು ಬರಿಯಲ್ಪವಲ್ತೆ?
ಅಂದ ಬಳಿಕಂ ಬಾಲ್ಯಕೌಮಾರ್ಯಗಳು
ಸಂದುವಾಟದಾವೋದದಲಿ.
ಅನಂತರಂ ಪೇಳಲೇನು ಜೀಯಾ!
ಕಲಿಕೆಯಾಲೋಚನೆಯಂ ಬದಿಗೊತ್ತಿ
ನಿರ್ವಿಣ್ಣತೆಯಲಿ ಮುಳುಗೆ ಮನೆವಾಳ್ತೆಯಲಿ
ಲೋಕಾಚಾರಕೆ ಹಣೆಯಂ ಮಣಿದು;

ಭವಸಾಗರದ ಬೃಹದ್ ಮೊಸಳೆ
ಕರ್ಚಿ ಪಿಡಿದುದು ತನ್ನಯ ಕ್ರೂರದಂತಿಗಳಲಿ
ಅತ್ತಿತ್ತಲುಗದಂದದಲಿ !
ಹಾ, ಕಳೆದುಹೋದುದು ಅರ್ಧ ಶತಮಾನಂ
ಕಣ್ಣೆದುರೆ ಅರ್ಥವಿಲ್ಲದಾವ್ಯರ್ಥಮೈಸಿ !
ಹಗಲಿರುಳು ದುಡಿದರೂ
ಕಿಂಚಿತ್ ಮನಶ್ಶಾಂತಿಯಂ ಪಡೆಯಲಾಸಳದೆ
ಪರಿತಪಿಸುತಿಹೆನಿಂದು ಭವದಗ್ನಿಯಲಿ ಬೆಂದು !

ಹೇ ಬ್ರಹ್ಮ ಮಾನಸ ಮಂದಿರೆ, ಪ್ರಭವೆ,
ಶ್ರೀ ಶಾರದೇ, ದೇವಿ ಭುವನ ಮನಮೋಹಿನಿ,
ವಾಗ್ದೇವಿ, ಮಹಾ ವಿದ್ಯಾಧಿದೇವತೆ, ವೀಣಾಪಾಣಿ
ಕರುಣಾಕರಿ, ಕರಕಮಲೆ, ಸಂಭವಿಸು ಮಮ ಪ್ರಾಣಮಂದಿರೆ !
ಮೇಣ್ ಆಶೀರ್ವದಿಸು ಅಭಯ ಹಸ್ತದಿಂ
ಉಳಿದಲ್ಪಕಾಲ ಕಿಂಚಿತ್ ಸಾರ್ಥಕವಾಗಲಿ ಎಂದು.

ನಮೋ ನಮೋ ವಿಭವೆ !
ನಮೋ ನಮೋ ವರದೆ !

ತಂಗಿಗೆ–

ಈ ಸುಂದರ ಜಗ ಸುಂದರ ದಿನ ಸುಂದರ ಮನ
ಸುಳಿದಿರೆ ಸುತ್ತ ನೀ ಬಿಡೆ ಎಂದಿನ ಮೋಹವಾಯೆ !

ಕೀರ್ತಿ ಕಾಂಚನಗಳಿಂ ಸಂಜನಿಸಿದೀ ಭ್ರಾಂತಿ
ಬಿಗಿದಿದೆ ನಿನ್ನಂ ಕೊನೆಯರಿಯದಾ ಬಾಳಿಗಂ !

ಕೇಳದೊ ಧೀಂಕಿಟ್ಟು ಭೋರ್ಗರೆದು ಮುನ್ನುಗ್ಗುತ
ಗರ್ಜಿಸುವ ಘನಘೋಷಮಯೀ ಕಡಲವಾಣಿ !

ಕೇಳದೊ ವೀರವೇದಾಂತಿ ಮೇರು ಸಮ ಋಷಿ
ವಿವೇಕಾನಂದರ ಅಮೃತಮಯ ಅಮರವಾಣಿ !

ಕ್ಷುದ್ರ ಮನೋಮಯ ರುಂದ್ರ ಆಸೆಯಂ ಕಿತ್ತು
ಆತ್ಮದಾವೇಶದಿ ಕಿವಿಗೊಡು ಓ ಎನ್ನ ತಂಗಿ !

ಸೊಕ್ರೆಟೀಸ್

ನಿನ್ನ ದುರ್ದಿನದ ದುಃಖ ದಾರಿದ್ರ್ಯ ಕೆಳೆಗೊಳೆ
ದೊರೆಯ ನೀತಿಗೆಟ್ಟಾಣತಿಯು ಜೆಂಬತ್ತಿ ಬರೆ

ಎದೆಗೊಟ್ಟು ಹೋರಿಯಂದದಲಿ ಹೋರಿ ದಣಿಸಿದೆ
ನಿನ್ನಾತ್ಮಂ; ನಿರಂಕುಶಮತಿ ಹೆ ಸೊಕ್ರೆಟೀಸ್!

ಜೀವನ ಬನದಮಿತ ಸುಖ ಸಂಪದವ ತೊರೆದು
ಜಗವೊಂಡರ ಅರ್ಥಹೀನ ವಾದವನೆದುರಿಸಿ

ಪ್ರತಿವಾದನೆ ಹೂಡಿ ಪರಮಹಿಂಸೆ ಸಹಿಸಿದೆ
ಪೂರ್ಣಪ್ರಜ್ಞ ಧ್ಯಾನಪರ ಯೋಗಿಯಂ ವಿಾರಿ!

ಧರ್ಮಕ್ಷುಧೆಯಿಂ ಪರಿತಪಿಸಿ ಹಗಲಿರುಳೂ
ಶ್ರಮಿಸಿ, ಕ್ರಾಂತಿಕಾರಿಯಂದದಿ ಜೀವ ತೆತ್ತೆ!

ಕ್ರೂರ ವಿಷವಂ ನೀರೆನೆ ಪೀರ್ದೆ ಹೆ ಗಂಡುಗಲಿ!
ಸತ್ತು ಗೆದ್ದೆ! ಜಗ ಕಣ್ದೆರೆಯಿತು ನಿನ್ನಿಂದೆ!

ಜೀವನ ಸಂಗೀತ

ವಸಂತ ಋತುವರಸ
ಸುಖಾಶ್ರಯದಲ್ಲಿ
ಮಿರುಗುವ ವರ್ಣವರ್ಣಗಳಿಂ
ರಂಜಿಸುತ್ತಿರೆ ಪುಷ್ಪೋದ್ಯಾನ
ಚಿತ್ತಾತ್ಮ ವೇದಿಕೆಗಳಿಗೆ
ಅನುಸಂಧಾನದ ಸೇತುವೆ ಕಟ್ಟಿ
ಚಿತ್ತಶ್ರೀ ಧ್ಯಾನ ಗದ್ಗದವಾಗೆ
ಅನುರಣಿತ – ಶುಭಭರಿತ
ನವೋನವ ಕಾವ್ಯಲಹರಿ
ಘುಮುಘುಮಿಸೆ ದಮನಿದಮನಿಗಳಲಿ !
ಆನಂದಾಶ್ರು ಬಿಂದು ಮೊಳೆತುವಲಾ
ಕಾಸಾರದಂತಾನನಗಳಲಿ !

ಹೃದಯದಿ ಸಾಕ್ಷಾತ್ಕರಿಸಿದ ರಸಚಿಂತನ
ಬಿಂದು, ಭಾವೋಜ್ವಲ ನಾಟ್ಯಮಾನ
ರಕ್ತ ಬಿಂದುವೊಳದ್ದಿ
ತಾರಕ ಮಂತ್ರಗತಿಯಲಿ
ಆರೋಹಣ ಅವರೋಹಣ ನಡೆಸಿ
ಭಗವಚ್ಚಿಂತಾ ಸ್ರೋತದಿ ಮಿಂದು
ಹರಿಯುತಿದೆ ನಿರಂತರ ಧಾರೆಧಾರೆಯಪ್ಪಿ !

ತರು ತಪೋವನದಲಿ
ನಿರ್ಜನ ಸುಖ ಸಂಗದಲಿ
ಮನಸ್ಸಿಗೆ ಶಾಂತಿಯನೋಂತು
ಕಣ್ಣಳಿಗೆ ದಿವ್ಯ ದೃಷ್ಟಿಯಂ ಸೂಸಿ
ರಸನೆಗೆ ಹೆಜ್ಜೇನ್ ಹೊಯ್ಯೆ
ನವಚೇತನ ಲಹರಿ
ಹರಿಸಿತಲಾ ಜೀವನ ಸಂಗೀತ!

ಗಡಿಯಾರ

ಅಯ್ಯಾ, ಸಾಧಕವರೇಣ್ಯ !
ನಿನ್ನ ಸ್ವಚ್ಛತನದ
ನಿಚ್ಚ ನಡೆ ವೈಲಿಗೆ ಮನದ
ಹೇಸು ಜನರಿಗಿನಿತು
ಈಸುಗಲಿಪಲದುವೆ ಪರಮ
ಉಪಕಾರ ಗಡಾ !
ನಿನ್ನ ನೆಲೆಯಲಿ ಹಗಲ್ ನಿದ್ದೆ
ಹೊಡೆದು ಸೋಮಾರಿ
ಲಾಂಛನ ಹೊತ್ತು ಬಿದ್ದಿರಲ್
ಅರ್ಥಹೀನ ಜನತತಿ
ಹಾದಿ ಬೀದಿ ಮನೆ ಮಠದಲಿ !
ಎನಿತು ಅಚ್ಚರಿಯೀ
ಬಗೆ ಹರಿಯದ ವಿಚಾರ ಸರಣಿ ?
ಕಲ್ಲು ಕೋಂಟೆಗಳ
ಬಿಗಿ ಸೆರೆಗಿಂ ಮನವಹೌಢ್ಯವದು
ಉಗ್ರ ಭೀಷಣವೈ
ಭವದೀಯ ಸಾಗರದಲಿ.
ಹಾ, ಕಡು ಕಷ್ಟಂ !
ಕಿರು ಮನದ ಜನರುದ್ಧಾರ !

ಹೇ ನಂದನಂದನ!

ಕೃಪೆಮಾಡು ದಯದಿಂದ ಹೇ ನಂದನಂದನ!
ಬಾಳ ಕೊಳಗುಳದಲಿ ಹಗಲಿರುಳು ತೊಳಲಿ ಬಳಲಿಹೆ.

ಮುಗಳೆಂದು ಬಂದು ಕಾಯೆನ್ನ ಬಹು ಸಡ್ಡೆಯಿಂ
ಬಳಿಯಲಿರೆ ನೀ ಬೆದರೆನು ಬಾಳ ಮರುಘರೆಗೆ
ನೀನಿಲ್ಲದೊಡೆಂತು ದಿನ ಸಾಗುವುದು ಹೇಳಾ!

ಹೃದಯ ಚೈತನ್ಯದೀಪವಾರುತಿದೆ ಸಣ್ಣ
ಮನದ ಮೈಲಿಗೆ ಮುಟ್ಟಿ, ಹೇಸದೆ ಕರುಣದಿ ನೀ
ಕಾಯೈ ಪರಮ ಕೃಪಾಳು ಹೇ ನಂದನಂದನ!

ನೆರೆ ನೀತಿಗೆಟ್ಟಾಟಗಳಿಗೆ ನೀನಲ್ಲದೊಡಾರು
ಕರುಣಿಪರು? ನೀ ದಯೆಗೈಯೆ ನಿನ್ನ ನೇಹದ ಕಿರಣ
ಸಂಸರ್ಗದಿಂ ಹರದಾರಿ ಹಾರ್ವುದೊ ಮೈಲಿಗೆ!

ಕೃಪೆಮಾಡು ದಯದಿಂದ ಹೇ ನಂದನಂದನ!
ಬಾಳ ಕೊಳಗುಳದಲಿ ಹಗಲಿರುಳು ತೊಳಲಿ ಬಳಲಿಹೆ.

ಲೆನಿನ್

ಓ ಬಡ ಬಂಧು ! ಲೆನಿನ್ ಮಹಾಶಯಾ !
ನಿನ್ನ ನೆನೆದೊಡೆನ್ನ ದಮನಿಗಳಲಿ
ಬಿಸಿರಕ್ತ ಧುಮುಧುಮಿಸಿ ಮೈಮನ
ನವಿರೆದ್ದು ತಟ್ಟನೆ ಬಿಸಿಯುಪ್ಪುದೈ
ಆರೆಚಣದಲಿ. ಹೇ ಕ್ರಾಂತಿಪುರುಷ !
ನಿನ್ನ ಹೆಸರು ಕಿರಿಯರಿಗೆ ಸ್ಫೂರ್ತಿಯೆನೆ
ಸ್ವಾರ್ಥಪರರಿಗೆ ಸಿಡಿಮದ್ದು ಮಾಣೊ !
ಅದ್ಭುತಂ ನಿನ್ನ ಸಮತಾ ಬೋಧೆ !
ಅನ್ಯಾಯಿಗಳ ಅನೀತಿ ಸಂಗ್ರಹದ
ಕೋಟೆ ಕೊತ್ತಳಂ ಒಡೆದು ಸರ್ವರಿಗೆ
ಸಮಪಾಲೆನೆ ನೀ ಉರಿಸಿದೆ ಉಜ್ವಲ
ನಿಃಸ್ವಾರ್ಥದಗ್ನಿ ಕುಂಡವ ಬೆಳಗಿ !
ಭೋಂಕನೆ ದೊರೆತನವಂ ಕಿತ್ತೀಡಾಡಿ,
ಸ್ವಾರ್ಥಿಗಳಂ ನಿಷ್ಕರುಣದಿ ಸುಟ್ಟು,
ಜಯ ಗಳಿಸಿದೆ ಎಣೆ ಇಲ್ಲದಿಹ ಧೀರ
ಕಲ್ಕಿಯ ದಿಟ್ಟತನದಾವೇಶದಲಿ !
ವಿನೂತನ ರಾಜ್ಯಾಂಗವ ನೀ ಕೋದು
ಬಡವ ರೈತ ಕೂಲಿ ಬಾಂಧವರಿಗೆ
ಆದರದಿಂದಿತ್ತೆ ರಾಷ್ಟ್ರ ಸೂತ್ರ
ಅಧಿಕಾರ ವ್ಯಾಪ್ತಿ !

ಭಾರತಾಂಬೋಧಿ !

ನಿರಂತರ ಸಂಯಾತ್ರಿ ಹೆ ಭಾರತಾಂಬೋಧಿ !
ಎನಿತೆನಿತು ಯುಗಗಳಿಂ ಎನಿತೆನಿತು ಕಲ್ಪದಿಂ
ನೀನಿಂತು ಉರುಳುತಿಹೆ ಸಮುಲ್ಲಾಸ ಭರಿತ
ಶೋಭಾ ಶೈಲಿಯಲಿ ? ಸೃಷ್ಟಿಯಾದಿಮ ದಿನದಿಂ
ಪಯಣಿಸುತಿಹ ನಿನಗಣಂ ಸೋಲಿನಿತು ಇಲ್ಲಿಂ !
ಮೃದು ಮಂದ ಸಂಗೀತ ನಿರ್ವೇಲ ಲೋಕವೆ,
ನಿತ್ಯ ಮೌನದೇಕಾಂತತೆಯ ಜಗಚ್ಛಾಸ್ತ್ರ್ಯ ಸುರ
ಕಿಣ್ಣ ವಾದ್ಯವೆ ! ಅಹ ! ಏಂ ಸೊಗಮೊ ತವ ಸುನೀಲ
ಧಾರೆ ! ನಲಿಯುತಿಹೆ ಹೊರಳುತಿಹೆ ಉರುಳುತಿಹೆ ನೆರೆ
ತುಂಬಿ ಸೂಸುತಿರಲ್ ಸಂಕೋಚವಿಲ್ಲದಿನಿತು.
ಒಮ್ಮೆ ತೆಪ್ಪನುರುಳಿದರೆ ಇನ್ನೊಮ್ಮೆ ಹುಚ್ಚಿದ್ದು
ಭೋರ್ಗರೆವೆ ! ಬಿರುಗಾಳಿಯ ಪ್ರಚಂಡ ವೇಗಕೆ
ಕೆರಳಿ ಪ್ರತಿಪ್ರಲಯ ರುದ್ರ ಸ್ವರೂಪವಂ
ದಿಟ್ಟತನದಲಿ ತೋರ್ಪ ಸುಂದರ ಸುಣ್ಣನ್ನಡಿಯೆ !
ಲೋಕಮೋಹಕ ಮಹಾ ನೂತ್ನಕೆಯೆ ! ಬಿರುಕಿಲ್ಲ,
ಒಡಕಿಲ್ಲ ನಿನ್ನ ಒಡಲಲಿ ! ಕಾಲಧರ್ಮ ಈ
ಬಳಿಯಲಿ ಕಾಲನೂರಂ ! ಹೇ ಮಹಿಮಾನ್ವಿತೇ !

ತಿರೆಯುಲಿಹ ಸಜೀವ ಸತ್ಯದೈಸಿರಿಗೆ ಮಿಗಿಲೆನೆ
ನಿನ್ನೊಳಿದೆ ಪ್ರತಿಸೃಷ್ಟಿಯು ದಿವ್ಯ ಪ್ರಪಂಚ!
ಏರಿಳಿತಗಳಲಿ ನೀ ಗಂಭೀರ ಲೋಕಜ್ಞೆ!
ಎಲ್ಲ ಹೊಳೆಗಳ ಹೀರಿ ಹಿಗ್ಗಿ ರುಂದ್ರ ಗತಿಯುಲಿ
ನುರ್ಗಿ ಪೊಡವಿಯನೂಡೆ ಹೊರನೀರ ತೆತ್ತು ನೀ
ತಗ್ಗುವೆ ನಿರ್ದ್ವಂದ್ವ ಮತಿಯುಲಿ, ಸುಡು ಹಗಲಿನ
ಬಿಸಿಲನತಿ ಬಿಸಿಲಿಸುವೆ. ಉಷ್ಣೋಷ್ಣ ಗಾಳಿಗಂ
ತಂಪೂಡಿಸುವೆ ಹೆ, ಮಹಾ ಪ್ರಕೃತಿ ಸಹಜಾತೆ!
ಶೀತಲರಾತ್ರಿ ನಿಶಾಂತವಾಶಾಂತಪ್ರಶಾಂತ
ನೀಲಿಮಾ ರಂಗಸ್ಥಲದಲಿ ಥಳಥಳಿಪ
ಸಕಲ ತಾರಾನಿಕಾಯ ಘನ ನೀರವತಾ
ನೋಂಪಿನಲಿ ಮಧುಮಯ ಮುಗುಳ್ನಗೆ ಬೀರುತಿರೆ
ಭೀಮಕಾಯದಾ ಧೂಮಕೇತು ಆರ ಪತನಕೆ
ನಾಂದಿಯೋ ಎನೆ ತೆಕ್ಕನೆ ಉಡುಗಣ ಮಧ್ಯೆ ಮೂಡಿ,
ಮಸುಗಾಂತಿ ತಳೆದು ಕಂತುತಲಿದೆ ಇದ್ದೆಡೆಯಲಿ!
ತೆಂಕಣಗಾಳಿಯು ಬಿಂಕದ ಸುಯ್ಲಿನ ಗಾನಕೆ
ದನಿಗೂಡಿಸುತ ಶತ ಸಹಸ್ರ ಪಕ್ಷಿಗೊರಳಿನ
ತರತರ ಸವಿಗಾನಂ ಹೊಮ್ಮುತಲಿರೆ ಸುಪ್ರಭಾತದಿ
ಅಲೆಯೋಳಿ ಉಬ್ಬುಬ್ಬಿ ಸಂತಸದಿಂ ಮುನ್ನುರ್ಗಿ

ಭೋರನೆ ತಿರೆಯನಪ್ಪಳಿಸಿ, ಮಿರಮಿರನೆ ಪೊಳೆವ
ಮೀನಂಗಳು ಥಣಕ ತಣಕೆನುತ ಸುೞದಾಡಿ ನುಸುಳಿ
ಸಿಕ್ಕಿದಗುಳಂ ಗುಳಕ್ಕನೆ ನುಂಗಿ ಅಲೆಯೊಡನೆ
ಹಿಮ್ಮರಳ್ವುದನೀಕ್ಷಿಸಿ ಪಗಲ್ ಶೃಂಗೇಂದು
ಮ್ಲಾನ ನಗೆಯುಂ ಬೀರಿ ಮೆಲ್ಲಮೆಲ್ಲನೆ ಶಿರವ
ದೂಗಿದಂ.   ಸಂಯಾತ್ರಿಪ ಕಾಲನದ ನೋಡುತ
ಮುನ್ನಡೆದ ದಿಟ್ಟ ಮಹಾ ವಿಸ್ತಾರ ಶೋಭಾ
ಶೈಲಿಯಲಿ.   ಅಃ! ನಿತ್ಯನಾದದೇಕಾಂತತಾ
ಸುನೀಲ ಸಾಗರವೊ? ಹರಿನಾಮ ಭಜನಾದಿ
ನಿರ್ಘೋಷದಾಗರವೊ? ಏನಿಂತು ಮರ್ಮರಿಪೆ
ನಿನ್ನೊಳೆ? ಮಂದರಂ ಕಡೆದ ನೋವಿನ್ನು ಇಹುದೆ
ದೇವಿ? ಅಸುರರು ರತ್ನಗಳ ಕೊಂಡೊಯ್ದರೆಂದು
ನರಳುತಿಹೆಯಾ? ಹಡುಗುಪಡೆ ನೈಕೀಸುತಿಹವೆ?
ಚರಾಚರಂಗಳ್ ಒಡಲಲಿ ಗುಳುಗಾಡುತಿಹವೆ?
ಆವ ಕೊರಗು ಹತ್ತಿಹುದು ತವ ಮನೋದಧಿಗೆ?
ಸೋದರಿ ವಸುಧೆ ದಿನದಿನ ಪರಿವರ್ತಿಸುತಿರೆ—
ಆ ರಾಜ್ಯವೀರಾಜ್ಯ ಓ ರಾಜ್ಯ – ಎನುತ್ತಲಿ
ನೀ ದಿನಕರನೊಲ್ ಮಾರ್ಪಡದಿನಿತು, ಗತಿಯಣಂ
ಬೇರ್ಪಡಿಸದೆ ಜನ್ಮದಾರಭ್ಯ ಒಂದೆತೆರಂ
ಬಾಳ್ವ ನೀಲಸಾಗರ ಮೋಹಕ ತಪಸ್ವಿನಿಯೆ!

ನಿನಗಣಂ ಎಣೆಯಿಲ್ಲವೀ ಭುವಿಯಲಿ. ನಿನ್ನ
ಬೃಹದ್‌ಗರ್ಭ ಮಂಜರಿಯಲಿ ವರ ಸಸ್ಯಾಳಿ
ಜೀವಾಳಿ ರತ್ನಾಳಿ ಶೈಲಾಳಿಗಳ್ ತುಂಬಿವೆ
ಪರಂಪರಾಗತಿಯಲಿ ಅಸಂಖ್ಯ ವೇಶದಲಿ
ಅನಂತ ಭಾವದಲಿ ಜೀವಾಜೀವ ಸೃಷ್ಟಿಯೆ
ನಿನ್ನೊಳಗಿರೆ ಇನ್ನೆಲ್ಲಿಯ ಕೊರತೆ ನಿನಗಣಂ ?
ಏಂ ಬಿಮ್ಮು ? ಏಕಿಂತು ಹನಿ ಮುತ್ತುಗಳ ರಕ್ತಿಮ
ಲೀಲೆಯುಣಂ ಗಂಭೀರವಾಯ್ತಲಾ ! ಚೋದಿತ
ನಿಷ್ಠುರ ನಿತ್ಯ ಕರ್ಮಯೋಗಿಯೊ ಎನೆ ಇನಿತು
ಅಹರ್ನಿಶಿ ವ್ಯಾಪಾರಿಸಿ ಶ್ರಾಂತ–ಕ್ಲಾಂತ ಮನದಿ
ನಿಸ್ಸೀಮ ಭಾವದೇಕಾಂತತಾ ಪೂಜ್ಞೆಯಲಿ.
ನಿನ್ನ ಸೃಜಿಸಿಹ ಪರಾಶಕ್ತಿಯಂ ನೆನೆಯಲ್
ಆವ ಮನಂ ಹಿಡಿವುದು ನಾಸ್ತಿಕ ಪಥಂ ? ಎನಿತು
ಅದ್ಭುತಂ ! ಜ್ವಲಿಪ ತಾರಾ ಜ್ಯೋತಿಷ್ಮತಿ
ಬಿಂಬಿಸಲ್ ತವ ಹೃದಯ ಮುಕುರದಲಿ. ಸಂಧ್ಯಾ
ಸೂರ್ಯನ ಶೋಣಿಪ ಸೋನೆ ಮಳೆಗರೆಯೆ ಅಪೂರ್ವ
ರಂಗೊರೆದು ಪಶ್ಚಿಮದಂಚದು ಪೊನ್ನಪ್ಪಲುರೆ,
ದಿಗಂತದಿ ತಾ ಅಸ್ತಮಿಪ ಮುನ್ನ ಸಂತಸದಿ
ಶುಭವಂ ಕೋರ್ವನಲಾ ಸಾಯಂ ಶಿರೋಮಣಿ !

ಹೇ ನೇಗಿಲಯೋಗಿ !

ಹಾಡುತ ಹೂಡು ಹರವಾಗಿ
ಹೇ ನೇಗಿಲ ಯೋಗಿ !

ಹಾಡೆ ಒಲಿದು ಹದ ಪೆಂಪಾಗಿ
ಹಾಡಗಬ್ಬ ದಿವ್ಯ ಗೊಬ್ಬರವಾಗಿ
ಬೆಳೆವುದು ಬತ್ತ ಹುಲುಸಾಗಿ !
ತಾಳ ಮದ್ದಳೆಗಾಗಿ
ಕಾಯದಿರು ಮೋಹತಾಗಿ
ಹಾಡೆ ಉಲ್ಲಸವಾಗಿ
ಕಂಠಪೂರ್ತಿ ಗೇಯವಾಗಿ
ಕುಳದ ಮೊನೆ ಹರಿತಾಗಿ
ನೆಲದ ಒಡಲು ಮೆದುವಾಗಿ
ಹೊಮ್ಮುವುದು ದಯೆ ರಾಗಿಯಾಗಿ
ಹಾಡುತ ಹೂಡು ಹರವಾಗಿ
ಹೇ ನೇಗಿಲ ಯೋಗಿ !

ತನುಮನಕುಲ್ಲಸವಾಗಿ
ಗೆಯ್ಮೆ ನೂರ್ಮಡಿಯಾಗಿ
ಬಾಳ್ಮೆ ಸಂಪದವಾಗಿ
ಜನಸಾಗರಕನ್ನವಾಗಿ
ನೀನಾದಪೆ ನಿಜತ್ಯಾಗಿ
ನಿರ್ಮಲತರ ವರ ಭೋಗಿ
ಹಾಡುತ ಹೂಡು ಹರವಾಗಿ
ಹೇ ನೇಗಿಲ ಯೋಗಿ !

ದೇವರ ನಾಮ

ಕೃಷ್ಣ ಬಾರೋ ಶ್ರೀ ಕೃಷ್ಣ ಬಾರೋ |
ಕಂದರ್ಪನಯ್ಯನೇ ನೀ ಬಾರೋ ||
ಕರ್ಣಕುಂಡಲ ತೊಟ್ಟು ಜಗಜಗಿಪ ಕಿರೀಟವ
ನಿಟ್ಟು ನಗೆ ಮಲ್ಲಿಗೆಯ ಬೆಳಗುತ ಬಾರೋ !
ಚಿನ್ನ ಚೀನಾಂಬರವುಟ್ಟು ಗೆಜ್ಜೆ ಪಾಡಗ ತೊಟ್ಟು
ಧಿಮಿಧಿಮಿ ಕುಣಿಯುತ ಬಿಸಜಾಕ್ಷ ನೀ ಬಾರೋ ||
ಕಣ್ಣಿಗೆ ಕಾಡಿಗೆಯಿಟ್ಟು ಕೊರಳ ಹಾರವ ತೊಟ್ಟು
ಪೊಳೆವಾ ಕಸ್ತೂರಿ ತಿಲಕದೊಡನೆ ನೀ ಬಾರೋ ||
ಕೃಷ್ಣ ಬಾರೋ ಶ್ರೀ ಕೃಷ್ಣ ಬಾರೋ |
ಕಂದರ್ಪನಯ್ಯನೆ ನೀ ಬಾರೋ ||

ಹೇ ಪುಷ್ಪ ಭಗವನ್ !

ಹೂಬಿಸಿಲಟ್ಟಿದ ಉದ್ಯಾನದಲಿ
ಹೊತ್ತರೆ ತಂಪಿನ ಹೊತ್ತರೆ ಸೊಂಪಿನ
ಹೊತ್ತರೆಯಾ ಸಂಭ್ರಮ ವಿಶೇಷದಲಿ
ನಿಂತು ನೋಡಿ ಹೂವಿನ ದಿವ್ಯಾಕಾರ !
ಬರಿ ನೋಡುವುದಲ್ಲೊ, ಅನುಭಾವಿಸಿ ಕಾಣ್ ;
ಇದು ಸಂದರ್ಶನ !
ಇದುವೇ ತರು ಸಾಕ್ಷಾತ್ಕಾರ !
ನಿಂತ ನಿಲುವಿನಲಿ ಮರವಟ್ಟು
ಧ್ಯಾನಲೋಕವ ನೀ ಹೊಕ್ಕು
ಅವಲೋಕಿಸೀ ಪ್ರತ್ಯಕ್ಷಂ !
ಸಜೀವ ಸತ್ಯದೈಸಿರಿಯಲಿ
ಸುಂದರ ವರ್ತುಲಾಕಾರ !
ಶಿವ ಸತ್ಯವೋ ಎನೆ ದಿವ್ಯ ಪುಷ್ಪಾಕಾರ !
ನಿತ್ಯ ಮಂಗಳ ನೇಮದಲಿ
ಶಿವನೇ ಆಗಿರು ಇನ್ನೇನೇ ಆಗಿರು
ನಿನಗಿದಕೋ ನಮ್ರ ನಮನ !
ಹೇ ಪುಷ್ಪ ಭಗವನ್ !

ಕಂದನಿಗೆ–

ಮುದ್ದು ಮೊಗದ ಕಂದ
ಬಂದೆ ಅಂದ ಚೆಂದ
ಸೂಸಿ, ನಕ್ಕು ನಗಿಸಿ
ಸುಖ ಶಾಂತಿ ತಂದೆ!
ಹಾ........ಕಂದ!

ಎದೆಯ ಗಡಲ ಮಮತೆ
ತುಂಬಿ ಹರಿದು ಬರಲು
ನೇಹದಿಂದ ನಲಿದೆ
ಪ್ರೇಮಭಾವ ಚೆಲ್ಲಿ!
ಹಾ........ಕಂದ!

ನೀನು ತಂದ ಅಮಿತ
ಜೀವಶಕ್ತಿ ಮೇಣ್
ನಗೆಯ ಮುಗುಳ ಕಾವು
ಎನಿತು ಮುದವ ತಂತು?
ಹಾ........ಕಂದ!

ಪುಟ್ಟ ಪುಟ್ಟ ಹೆಜ್ಜೆ
ಇಟ್ಟು ಮುದ್ದು ಮುದ್ದು
ಮಾತನಾಡಿ, ನಕ್ಕು
ನಗಿಸಿ ಗೆಲವು ತಂದೆ
ಹಾ........ಕಂದ!

ಜಗದ ಜಾಲ ಬೀಸಿ
ಎಲ್ಲ ' ನಂದು ' ಎಂಬ
ಮೋಹ ಮಾಯೆ ತುಂಬಿ
ದುಕ್ಕ ಮೊಳಕೆ ಮೂಡಿ
ಹಾ........ಕಂದ !

ಎರಡು ವರುಷ ಬಾಳ್ಮೆ
ತಂದ ಪರಮ ಹರುಷ
ಪಡೆದ ದುರಿತ ದುಕ್ಕ
ಮರೆಯುಲಾರೆನಿನ್ನೂ
ಹಾ........ಕಂದ !

ವಿಧಿ ಖಡ್ಗ ಬೀಸಿ
ರೋಗ ರುಜಿನ ಹಚ್ಚಿ
ದುಕ್ಕ ದುಗುಡ ತುಂಬಿ
ಕೋಡಿ ಹರಿದು ಹೋಗೆ
ಹಾ........ಕಂದ !

ಗುಡುಗು ಮಿಂಚು ಮುತ್ತಿ
ಮನದ ನೆಚ್ಚು ಕಳೆದು
ಎದೆಯ ಗೂಡು ಒಡೆದು
ಸಕಲ ಮುದ್ದು ಗೈದೆ
ಹಾ........ಕಂದ !

ಇಷ್ಟ ದೈವ ಬೇಡಿ
ಕಷ್ಟ ಕಳೆವೆ ಎಂದು
ಹಗಲು ಇರುಳು ಹರಕೆ
ಹೊತ್ತು ಪೂಜೆಗೈದೆ
ಹಾ........ಕಂದ !

ಪುಟ್ಟ ಕೈಯ್ಯ ಮುಗಿದು
ಕಂದ ನೀನು ಪೂಜೆ
ಗೈದೆ ದೇವ ಮಾತ್ರ
ಒಲಿಯಲಿಲ್ಲ ನಮಗೆ
ಹಾ........ಕಂದ !

ಮೋಹ ಮಾಯೆ ಮರುಳು
ಮಾಡಿ ಬಿಗಿದ ಬಂಧ
ಅಮಿತ ಆಸೆ ಕೊನರಿ
ಪಡೆದ ಮಹಾ ದುಕ್ಕ
ಹಾ........ಕಂದ !

ಕಳೆಯಲಾನು ದಾರಿ
ಕಾಣೆ, ತೊಡೆಯಲಾನು
ನೀರು ಕಾಣೆ, ಎಲ್ಲಿ
ಪೋಗೆ ಎಲ್ಲ ಬರಿದು
ಹಾ........ಕಂದ !

ಮನವು ಬರಿದು, ಎದೆಯು
ಬರಿದು, ಆಸೆ ಇಷ್ಟ
ಎಲ್ಲ ಬರಿದು ಜಗದ
ಮೋಹ ಮಾಯೆ ತುಂಬಿ
ಹಾ........ಕಂದ !

ಕಾವ ಈಶಕಾಣ
ಎನ್ನ ದುಕ್ಕ, ಕೊಲ್ವ
ದೇವ ನೋಡ ಎನ್ನ
ಕಣ್ಣ ಅಶ್ರು ಬಿಂದು
ಹಾ........ಕಂದ !

ನಿನ್ನ ಆತ್ಮ ಶಾಂತಿ
ನೊಂದ ಮನದ ಶಾಂತಿ
ಗಾಸಿಗೊಂಡ ಒಡಲ
ಶಾಂತಿ ಮೂಡಿ ಬರಲಿ
ಹಾ........ಕಂದ !

ಹೃದಯದ ಮೊರೆ

ಗುಡಿಯ ದೇವತೆಗಳಿರಾ! ಮಲೆಯಕ್ಷಿಗಳಿರಾ!
ಕಡಲಪ್ಸರೆಯರಿರಾ! ಇಳೆಯ ಮಾತೆಯರಿರಾ!
ಕೈಮುಗಿದು ಬೇಡುವೆ ನಲುಗಿದೆನ್ನೆದೆಯನಿನಿತು
ಸಂತವಿಸಬನ್ನಿ, ದಯಾರ್ದ್ರೋದರ ಮನದಿಂದೆ.
ಮುಂಗಾರ ಮೋಡಗಳೇ ಮುನ್ನೀರ ನೀಡಿ
ದುಃಖದ ಕಡಲ ಕೋಡಿಯ ಹರಿಸಲ್ ಸರಾಗ!
ಝುಂಝಾಮಾರುತನೇ ರುದ್ರೋಚ್ಛ್ವಾಸವೀಯು
ಎದೆಯಗೂಡಿನಲಿ ಶ್ವಾಸನಿಶ್ವಾಸವಾಡೆ!
ಗುಡುಗು ಮಿಂಚು ಕಡೆದ ಮಹಾ ಶಕ್ತಿ ಸಂಪುಟವೆ
ಹರಿಸೆನ್ನ ನರನಾಡಿಗಳಲಿ ನವಶಕ್ತಿಯಂ!
ಮನೆಯ ಬೆಳಗಲೆನೆ ಉರಿಸೆ ನಂದಾದೀಪವಂ
ಕುಡಿಯುಳಿದು ಕತ್ತಲಾಯ್ತು ತೈಲವಾರ್ಪ ಮುನ್ನ
ಅನುತಾಪದ ಬಿಸುಸುಯ್ಲಿನ ಗೋಳನೆ ಸೂಸಿ.
ಮಾಮರದಟವಿಯಲಿ ಮಿಣುಮಿಣುಕುವ ಶತಸಾಸಿರ
ಮಿಂಚುಹುಳುಗಳ ದೀವಳಿ ನಡೆದಿರೆ ನಿರಂತರ
ಹಣತೆಯ ಕುಡಿಗಿಂ ಮಿಗಿಲೆನೆ ಎನ್ನಯ ಮುಂತೆ;
ಕಣ್ಣುಮುಚ್ಚಾಲೆಯಾಡಿ ಮಂಗಲ ಸಂಘದ
ರಂಗದಲಿ ಕಡುಗತ್ತಲೆಯಾ ಜಾಲವನಿರಿದು
ನನ್ನೆದೆಯ ಬೇಗೆಗೆ ಇನ್ನಿನಿಸು ಉರಿಕಿಡಿ ಸೂಸಿ!

ನಿಶ್ಚಂದ್ರ ನಭದೊಲ್ ಕಳೆಗುಂದಿ ಬಾಳ್ಬನ
ಬಣಬಣವೆನೆ ನೀವಲ್ಲದೆ ಎನಗೆ ಗತಿಯಿಲ್ಲ.
ಈ ಪೊಡವಿಯಲಿ ಇನ್ನಾವುದನೂ ಬಯಸಲೊಲ್ಲೆ,
ಮನದ ಮೋಹ ಮಾಯೆ ಅಳಿದು ನಿಮ್ಮ ನೆನಹಿನಲಿ
ದೇವ, ಮೂಯಲೆನ್ನ ಹೃದಯಗಾಯ ; ತವಕೃಪಾ
ತೈಲದಿಂ ತುಂಬಿ ಮುನ್ನಿನೊಲು ಉರಿಯಲೆನ್ನ ಮಂದ
ಮನೋದೀಪ್ತಿ ನಿತ್ಯ ನಂದಾದೀಪ ವ್ಮೈಸಿ !
ಚಿರ ಕರ್ಮಕಾಮಿನಿಯ ಬೇಡಿಕೆಗೆ ಮನವೊಲಿದು
ನಿಮ್ಮಯ ಪಡಸಾಲೆಯ ಕಿರುಸಂದಿ ಮೂಲೆಯಲಿ
ನಿಲುವೆಡೆಯ ನನಗೀಯೆ ಸಾಕು ; ಅಷ್ಟು ಮಾತ್ರಂ
ಪರಾಂಬರಿಸೆ ಮಹಾ ಪುಣ್ಯಪದವೆಲೆ ದೇವ !
ನಿನ್ನೊಡ್ಡೋಲಗದಲಿ ಬೆರೆಯೆ ಎನ್ನಳವೆ ? ಇಂತು,
ಎನ್ನಿರುವಂ ಮರೆಯದೆಲೆ ಕಿಂಚಿತ್ ಕೃಪೆದೋರೆ
ಸಾಕೆಲೊ ದೇವರದೇವ ! ಇನ್ನೀ ಬಾಳ್ಬಯಸಿ
ನುಡಿಯಲಾರೆ ಮತ್ತೆ ನೋಯಲಾರೆ ತವ ಮನವ
ಬಳಲಿಸೆ ಎನ್ನೀ ಕಥೆ ಹಾಡನೆ ಮುಂದರಿಸಿ.
ಕೈಮುಗಿದು ಉತ್ತರೀಯವೊಡ್ಡಿ ಬೇಡುವೆನೊ
ಲಾಲಿಸುವೊಡೆ ಲಾಲಿಸು—ನಮ್ಮನಲ್ಲಡೆ ನಮ್ಮ
ಪಿರಿಯರ ನೆನಸಿ ಮನಮರುಗಿ ನೀ ಪಾಲಿಸಾ—

ಪ್ರಾತಃಸೌಂದರ್ಯ

ಚೈತ್ರೋದಯ ಸಂಭವಿಸಿ
ನವಛವಿ ಪೊಮ್ಮುತಲಿರಲು
ವಿಯುದ್ರಂಗವು ಪೊಳೆದತ್ತು
ನೀಹಾರಿಕಾ ಸುಂದರಿಯು
ಸೌಂದರ್ಯವ ಸೂಸಿ!

ಹಸುರ್ತೊಟ್ಟಿಲ ಹನಿ ಶಿಶುಗಳು
ಮಿನುಗುತಿರೆ ಮಿಂಚಿನಂದದಿ
ಎಲ್ಲೆಡೆಯು ಕಿಡಿಕಿಡಿಯುಪ್ಪಿ
ವಜ್ರಮಯ ತರು ಶರೀರವ
ನೋಡಾ ನೋಡಾ!

ಓ ಪ್ರಾತಃಸುರ ಸುಂದರಿ
ಸಕಲ ಜೀವನಾಲವಾಲ
ಸ್ಫೂರ್ತಿ ಕಾವ್ಯ ನಿರ್ಝರಿಣಿ
ಸಲಿಪ್ತ ಮಧುರ ಮಾಯಾ
ಮನಮೋಹಿನಿ!

ಪೂತ ಚೂತ ವೃಕ್ಷ ಶಿವೆ
ಗಂಧ ಮಾಧುರ್ಯ ಬೀರಿ
ದುಂಬಿಗಳನಾಕರ್ಷಿಸಿರೆ
ಪೊಣ್ಮಿದುದು ನವೋನವ ವರ
ಝೇಂಕಾರ !

ನೀರೆ ರಸಮತಿ ಕವಯಿತ್ರಿ
ನಿಂದಿರೆ ಭಾವೋನ್ಮಾದದಿ
ಜಗ ಸಮಸ್ತವ ಬದಿಗೊತ್ತಿ
ಕುತೂಹಲ ಕುದಿಯಿತು ನವ್ಯ
ಕಾವ್ಯ ಸ್ಫೂರ್ತಿಯಲಿ !

ವಾಣೀ ಗೀರ್ವಾಣೀ !

ಹೇ ವಾಣೀ ಗೀರ್ವಾಣೀ !
ದಯೆದೋರು ನೀ ಕೃಪೆಯಿಟ್ಟು
ಪ್ರಾಂಜಲೀ ಬದ್ಧಳಪ್ಪಿ
ಬೇಡುವೆ ನಿನ್ನಂ ನಿತ್ಯ ;
ಮಮ ಹೃದಯ ಕಮಲ
ಕರಂಡದಲಿ ಅಡಿಯಿಟ್ಟು
ನಿಗಿನಿಗಿ ನರ್ತಿಸು ತಾಯೆ !
ನೀನೊಲಿದು ತತ್ತ್ವಗಳ ತುಳಿಯೆ
ದಳದಳ ಅರಳ್ಪುದೆನ್ನಯ
ಮನಃಕುಂದ ಕುಟ್ಮಲ !
ಮಮ ಶಿರವೇರಿದ ವಿಧವಿಧ
ಭಾರವನಿಳುಹಿ ಪಡೆವೆ
ಜೀವನ್ಮುಕ್ತಿ – ಧನ್ಯತಾ ಶಕ್ತಿ.
ಕಪ್ಪು ಮೇಘ ಕಾಂತಿಯ
ತಪ್ಪು ಸಾಸಿರಗಳ ತೊಡೆದು
ಕೈಪಿಡಿದು ಕಾಪಿಡು ತಾಯೆ !
ವಾಣೀ ವಿದ್ಯಾನಂದಕರೀ !

ಭವ ಬನ್ನ

ಓಹೋ ! ನೋಡಾ ! ಭಾರತ ಭುವಿಯಖಿಲ
ಪವಿತ್ರ ಕ್ಷೇತ್ರದ ಚಿರಾಚರಿತವೆನಿಸವಿಾ
ಭವ್ಯ ಸಂಸ್ಕೃತಿಯಲಿ ನರನರಗಳೂ ಕಿತ್ತು
ಹೋಹಂದದಲಿ ನರಳುತಿಹಳಾ ಮಕ್ಕಳ ತಾಯಿ !
ಸಮ್ಯಕ್ ಚರಿತ್ರ ರಸಾರ್ದ್ರತೆಯಣಂ ಕಾಣದೆ
ತನ್ನಯ ಸಂತತಿ ಸಹಸ್ರ ಸಹಸ್ರ ಕೋಟಿಯಲಿ.
ಹರಿದಿರಲ್ ಘೋರ ಘೋರ ರಾತ್ರಿಯಂತಿಂತು
ಮಗುಳದ ಮೊಗಗಳ ಕಣ್ಣಿನಸು ಮಾಗದೆ ಕೋಟಿ
ಶತಕೋಟಿ ಸುದತಿಯರ ಕಣ್ಣೀರು ಕಡಲೆನೆ
ಹರಿಯುತ್ತಿದೆ ನಿಚ್ಚ ಮುಂಗಾರ ಮಳೆಯೋಲ್ !
ಕಾಲ ಅಳಿಯಿತು ; ನವನಾಗರಿಕತೆ ಬೆಳೆಯುತಿದೆ.
ದಿಶೆದಿಶೆಯಲಿ ಸರಸತೀ ಮಂದಿರಗಳಿದ್ದಿವೆ.
ರಾಷ್ಟ್ರರಥ ಸಾರಥಿ ಇಂದು ಸನ್ಮಾನ್ಯ
ಮಹಿಳಾಮಣಿಯೆ ದಿಟಂ. ಈ ವಿಚಿತ್ರ ಜಗದಲಿ
ಮನೆಯಿಲ್ಲದೆಮಗೆ ಮನವಾಳ್ಕೆಯಿಹುದು ನೋಡಾ !
ಜಾನಗೇಡೀ ಸಂಸಾರದಲಿ ಅಬಲೆಯರ್ಗೆ
ಕಡು ಹಿಂಸೆಯ ಹಿರಿ ಸಂಬಳಕಿನಿತು ಕೊರವಿಲ್ಲ.
ಆನೆವಾಗಿಲ ಮಿಸುನಿಕ್ಕೈ ತೆರವಿಲ್ಲದೆಮಗೆ
ವಿದ್ಯೆ ಬುದ್ಧಿಗಳ ದಾರಿದ್ರ್ಯಮೊಲಸಿನ ತುತ್ತೆ
ದಿನಕೂಳು ; ದಿನವಹಿ ಬಹ ಕೇಡೆಮ ಒಡಹುಟ್ಟು !
ಹಾ ! ಕಾಂಬುದಾರಿಗೆ ನಾವಿಂತು ಬಹ ಬನ್ನ ?
ಕಣ್ಣಿದ್ದೂ ಕುರುಡಮೊ ಜೀವಿದ್ದೂ ನಡೆವೆಣಮೊ
ನಮ್ಮಯ ಬಾಳು ! ಅಕಟಕಟಾ ! ಹೊನ್ನೊರೆಯ ಹಿರಿ

ಗತ್ತಿಯುಡಿ ಬದುಕು ಸರ್ವತಃ ನರಕತರ ಕಣಾ!
ಅಂತುಟು ಭಂಗಧಾಮಪಂ ಬಣ್ಣಿಸಲಿನಗಂ
ಶಕ್ತಿಯಿಲ್ಲಣಂ, ಬರೆಯುವೆನೆ ಈ ಲೆಕ್ಕಣಿಕೆಯು
ಹರಿಯದೀ ದಿಶೆಯಲಿ; ಹೆ ವಾಣಿ! ನಾಂ ಪೊಡವೊಡುವೆ
ನಿನಗಂ, ನೀನೆ ಬಿತ್ತರಿಸು ಎಂದಾದರೊಮ್ಮೆ
ಮನು ಸಂಕಷ್ಟವಂ ನಿನ್ನಯ ದಿವ್ಯ ಓಜೆಯಲಿ!

ದೇಶದ ದಾಸ್ಯ ತೊಲಗಿದರೇಂ? ನಮ್ಮಾ ಬನ್ನ
ಹರಿದುದೇ? ಕಿಂಚಿತ್ ಸಮಾನತೆಯು ಸವಿಯಂ
ಕಂಡೆವೆ? ಎಂದಾದೊಡಂ ಈ ಶತಮಾನದೊಳ್
ಕಾಂಬೆವೆ? ಅಕಟಕಟಾ! ಮನುಜ ಕಾಮ ಪಿಪಾಸೆ,
ಸ್ವಾರ್ಥಪರತೆ ನಶಿಸಲಹುದೇ ಸುಲಭದಲಿ?
ಯೋಚಿಸಲದು ಎಲ್ಲವು ಭ್ರಮೆ-ಭ್ರಾಂತಿ ಕಣಾ!
ಕೊನೆಗಾಣದಾ ಬನ್ನದಲಿ ಸಿಲ್ಕಿ ಮನಂ ಕಡು
ನೊಂದಿರಲೆನೆ ಎನಗಣಂ ಸರಿಸಮಾನತೆಯಾಸೆ
ಮೂಡಿರಲಕ್ಕು ಎನೆ ಸಾಜಂ. ಅರ್ಧ ಶತಮಾನ
ನೀಡಿದನುಭವ ಮನಕೆ ಪುಟಗೊಟ್ಟಿರಲಕ್ಕು
ಎನೆ ಅಲ್ಪಮಲ್ತು. ವಯಸ್ಸಿಗನುಗುಣಮಪ್ಪಿ
ಭಾವನೆ ಹಣ್ಣಾಗಿರಲಕ್ಕು ಹೇಳಲಾಸಲ್ಲ-
ಏನೇ ಇರಲಿ, ಮುಂದಣ ಪೀಳಿಗೆಯಾದೊಡಂ
ನರಳದಿರಲಿ ಗೃಹಬಂಧನದಲಿ ಎಮ್ಮಂತೊಲ್!
ಮಂಗಳೆ ಜಯಮಕ್ಕು, ಗೆಲಮಕ್ಕು, ಶುಭಮಕ್ಕು
ನಿನ್ನಯ ಭವ್ಯ ಭವಿಷ್ಯಂ!

ಕೂಜನಾತಿರೇಕಂ !

ಎನ್ನ ಕೈಯೊಳು ಲೆಕ್ಕಣಿಕೆಯೆಂತೊ
ಅಂತೆಯೆ ವಿಧಾತನ ಕೈಯೊಳಾನು !
ನಿತ್ಯಾನಂದರೂಪಿ ಎನಿಪ ಆ
ಈಶ್ವರನ ಲೀಲಾ ಖೇಲನ
ಜಾಲದೆ ಪೊಣ್ಮಿದ ನೂತನ ಕವಿತೆ
ಅಂತಃಸುಖಕೆ ಸಾಧನೆಗಡ !

ಮನನೊಂದು ಬಗೆಗದಡಿರೆ ಪೆರ್ಚು
ಉಲಿವೆ ಅಂತಃಸತ್ವವ ಕಾರಿ !
ವನದಿ ಉಲಿವಕ್ಕಿ ಹಿಂಡು ಉಲಿವ
ತೆರದಿ ಚಿಲಿಪಿಲಿ ರಾಗವ ಹಾಡಿ !
ಹೆರರನು ಮೆಚ್ಚಿಸಲಲ್ಲ ಕೇಳ್,
ಇಂತಖಿಲ ಕೂಜನಾತಿರೇಕಂ !

ಹೇ ಜಗಜ್ಜನನಿ!

ಇದುವರೆಗೆ ಧೂಳಾಡಿ ಕಳೆದಿಹೆ
ಚಿನ್ನರ ಪುಂಡರ ಮೋಜಿನಲಿ
ಇನ್ನಾದರೂ ಹಗಲಿರುಳೆನ್ನದೆ
ನೀ ಕೈ ಹಿಡಿದು ನಡೆಸೆನ್ನನು
ಹೇ ಜಗಜ್ಜನನಿ!

ಭವಬಂಧನಂ ಕಡಿದೀಡಾಡಿ
ವೈರಾಗ್ಯ ನಿಧಿಯಂ ಬಂಡಿಳಿಸಿ
ಮೃಣ್ಮಯ ಹೃದಯದಿ ಚಿನ್ಮಯ
ದೀಪ್ತಿಯನುರಿಸಿ ಮಮ ಜೀವನವ
ಬೆಳಗಿಸು ನೂರು ಆವೇಶದಲಿ
ಹೇ ಜಗಜ್ಜನನಿ!

ಹೇಮಂತ ಸಂಧ್ಯೆ !

ದೃಷ್ಟಿ ಕಕ್ಷೆಯ ಮೇರೆಯಂ ದಾಂಟಿ
ಮೇಘ ತಾನವಿತಾನವಂ ಮಿಾಂಟಿ
ಹಬ್ಬಿ ತಬ್ಬಿದೆ ದಿಗ್‌ದಿಗಂತ ವ್ಯಾಪ್ತಿ
ಶೈಯ್ಯಾದ್ರಿಯ ಅದ್ಭುತ ದಂತುರ ಶೈಲಿ !

ಅಲೆಯಲೆಯಪ್ಪಿದರಣ್ಯ ವಾರ್ಧಿಯಲಿ
ಕಠಿಣ ತಪವಂ ಗೈಯ್ಯುವುವೋ ಎನೆ
ವಿವಿಧ ಶೈಲ ವ್ಯೈದಾಳಿವೆ ನಿಶ್ಚಲ
ರೀತಿಯಲಿ ಮೇಣ್ ಅಸಂಖ್ಯ ಶ್ರೇಣಿಯಲಿ !

ಪಶ್ಚಿಮ ಪ್ರಾಂತದ ಗಿರಿಶಿಖರ ಶೋಭೀ
ಸ್ವರ್ಣ ವರ್ಣಮಯೀ ಹೇಮಂತ ರವಿ
ಬೆಳ್ಮುಗಿಲಂಚಿಗೆ ಹೊನ್ನೀರನೆ ಹೊಯ್ದು
ಕೆನ್ನಗೆ ಬೀರಿದ ಬಂಧುರ ನ್ಯಾಸದಲಿ !

ಸೌರ್ವರುಣ ಛಾಯಾ ಮೈತ್ರಿಯಲಿ ಮಿಂದ
ನಿರ್ಜನ ಧಾತ್ರಿಯ ಮನಮೋಹಕ ಶೈಲಿಯ
ಪರಮೈಕಾಂತದಲಿ ಮನ ನೆಟ್ಟಿರಲಾನು
ಎದೆಗಡಲುಕ್ಕಿತು ನವಕಾವ್ಯ ಸ್ಫೂರ್ತಿಯಲಿ!

ಸಮ್ಯಕ್ ದೃಷ್ಟಿಗೆಲ್ಲೆಲ್ಲಿಯು ಮಹತ್ತೆ!
ಕಣ್ಭ್ರಮರ ಸುಳಿದು ಸುತ್ತಿ ನಲಿಯುತಿರೆ
ಕಿವಿಜಿಹ್ವೆ ಶ್ರದ್ಧೆಯೊಳಾಲಿಸುತಿದೆ ಸುರ
ವನ ಶ್ರೇಣಿಯಲಿ ನಿಚ್ಚ ಝೇಂಕರಿಸುತ್ತಿಹ
ಆ ಓಂಕಾರ ನಾದ!

ಪರಮಾತ್ಮನಿಗೆ–

'ಅಣೋರಣೀಯಾನ್ ಮಹತೋ ಮಹೀಯಾನ್ |
ಆತ್ಮಾಸ್ಯ ಜಂತೋ ರ್ನಿಹಿತೋ ಗುಹಾಯಾಂ ||
ತಮಕ್ರತುಃ ಪಶ್ಯತಿ ವೀತಶೋಕೋ |
ಧಾತುಃ ಪ್ರಸಾದಾ ನ್ಮಹಿಮಾನ ಮಾತ್ಮನಃ' ||

ಎಂತುಟು ಜಾನಿಸುತಿಹೆ ಮನದಿ
ಅಂತುಟು ಘಹನವಲೆ ಕೆಳದಿ ;

ಅಂತರಾತ್ಮನತಿದೂರನೆ, ಪರಮಾತ್ಮನಂ ಭಾವಿಸೆ ?
ಆದೊಡಂ ತೊಳಲುತಿಹೆ ಪುಡುಕೆ ನಿನ್ನಂ ಹೇ ದೇವ !
ಶೋಕಮೋಹಾದಿ ಘನಿಸಿರೆ ಮನೋದಧಿಯಲಿ
ಎಂತು ಭಾವಿಸಲಿ ಇನ್ನೆಂತು ಪಡೆಯಲಿ ಹೇಳಾ ?

ಹೇ ಕರುಣಾಳು ಪರಮಾತ್ಮನೇ ! ದಿನ ನಿತ್ಯ
ಸೂರ್ಯಚಂದ್ರಾದಿ ಅದ್ಭುತ ಉಡುಗಣಂ ಬೆಳಗುತಿರೆ
ನಿನ್ನ ದಿವ್ಯ ಪ್ರಭೆಯಿಂ. ಈ ಕಿರು ಜೀವಿಯದು
ಬೆಳಗದೆ ತವ ಕೃಪಾಬಲ ಚಂದ್ರ ಚಂದ್ರಿಕೆಯಲಿ ?

ಓ ದಿವ್ಯ ಚೇತನಗಳೇ !

ಬನ್ನಿ ಬನ್ನಿ ಬನ್ನಿ
ಕರುನಾಡಿನ ಕವಿ ಹೃದಯದ
ಕರುವೀಂಟಲು ಬನ್ನಿ.
ಓ ದಿವ್ಯ ಚೇತನಗಳೇ !
ಅಂಬರದಿಂದಿಳಿದು ಬನ್ನಿ
ಭುವಿಯ ಹೊನ್ನಿಗೆ ದಿವಿಯ ನನ್ನಿಗೆ
ಚಿರ ಸೇತುವೆ ಕಟ್ಟಿ
ಕವಿ ಹೃದಯಕೆ ರಸಾನುಭವದ
ಅಮೃತ ಕುಂಭವ ಸೂಸಿ
ಸಕಲ ಸೃಷ್ಟಿಯ ಸರ್ವ ಸುಖಕೆ
ಮಂಗಳವ ಹಾಡಿ
ಶುಭವೆನ್ನಿ ! ಗೆಲುವೆನ್ನಿ ! ಜಯವೆನ್ನಿ !

ಶಾರದೆ

ಮಣಿಯಲೆನ್ನ ಶಿರ ಮುಡಿಯು
ನಿನ್ನ ಪುಣ್ಯ ಪದತಲದಿ
ಧ್ಯಾನ ಪೂಜೆಯ ನೇಮದಿ
ನಿತಾಂತ ವಿನಮ್ರತೆಯಲಿ
ಹೇ ತಾಯೆ ವರ ಶಾರದೆ!

ಅನಕ್ಷರತೆಯ ಹೋಗಾಡಿ
ಮನವಮೌಢ್ಯವ ಕಳೆದು
ಹೃತ್ಕಮಲ ಕುಂಡಲಿನಿಗೆ
ಜ್ಞಾನದಮೃತವನೀಯು
ಹೇ ತಾಯೆ ವರ ಶಾರದೆ!

ಭವ ಚಕ್ರದಲಿ ವಕ್ರ
ವಿಕೃತ ತಿಮಿರಂ ಕಾಡೆ
ನೀ ಕರುಣೆಯಿಂ ಕಾಪಿಡು
ವರ ಜನನಿಯ ನೋಂಪಿನಲಿ
ಹೇ ತಾಯೆ ವರ ಶಾರದೆ!

ಹೇ ಪುಂಡರೀಕಾಕ್ಷ !

ಶ್ರೀ ನಂದಗೋಪ ನಂದನ ಸುರವರ
ಸುಂದರ ಬಾರೆನ್ನ ಪ್ರೇಮದ ನಿಧಿಯೇ !

ಎನ್ನಯ ಬಳಿ ಒಂದಿನ ಚೆಂದದಿಂದ
ಇರುವಂದದಲಿ ಕೊಳಲೂದುತ ಓಡಿ ಬಾರೈ !
ಕೆನೆ ಮೊಸರು ಬೆಣ್ಣೆಯು ನಿನಗೀವೆ !
ಎಳೆದುಟಿಗಳಲಿ ಮುಗುಳು ನಗೆಯನು ಚೆಲ್ಲುತ
ಶೃಂಗಾರ ಮಧುರ ಮೋಹಕತೆಯಲಿ
ಪುಟ್ಟ ಪುಟ್ಟ ಹೆಜ್ಜೆಯಿಟ್ಟು ಓಡಿ ಬಾರ !

ಒಂದು ಗಳಿಗೆ ನಲಿನಲಿದು ಆಟವಾಡಿ
ಹೋಹಂತೆ ನೀ ಬಾರಯ್ಯ ವಾಸುದೇವ !
ಹರುಷದಿಂದಲಿ ದರುಶನವ ನೀಡು
ವರುಷ ವರುಷದಿಂದ ಕಾದಿಹೆ ನಿನಗೆಂದು
ನೊರೆಹಾಲಿನ ದಧಿಘೃತವನಾಂತು
ದಯೆದೋರೆನಗೆ ಹೇ ಪುಂಡರೀಕಾಕ್ಷ !

ತಾಯಿ ಗುರು ಕೃಪೆ

ಉದಯ ರವಿಯು ದರುಶನಕೆಂದಿಲ್ಲಿಗೈತಂದೆ ;
ಮೂಡಣ ದಿಶೆಯುಲಿ ರವಿ ಇಣುಕುವ ಮುನ್ನ
ಉಷಾ ದಿಙ್ಮಾತೆ ಮೈದೋರಿದಳು ಮುದದಿ !

ಕನಕ ಜಲಧಿಯಲಿ ತಾ ಮಿಂದು
ಬೆಳ್ಳಿಯಂಚಿನ ನೀಲಾಂಬರವುಟ್ಟು
ಆತ್ಮದಾವೇಶದಿಂ ಮುಗುಳ್ನಗೆ ಬೀರಿರಲ್
ಕ್ಷಣದಲೆನ್ನ ಕಂಠ ಆನಂದ ಗದ್ಗದವಾದುದು
ಸೌಂದರ್ಯ ಸಮೀಕ್ಷೆಯಲಿ ಮುಳುಗಿ
ಮೈಮರೆತ ರಸ ಋಷಿಯೋಲ್ !

ತಾಯಿ ಬಲುಮೆಯುಲಿ ಹರಸಿದಳೆನ್ನಂ
ಹೃದಯದ ಪೊಂಗಡಲ ಹೊನ್ನವಾರಿಯುಂ
ಚೆಲ್ಲಿ ಸೂಸಿ. ಕಿರುವನೆಯಲಿ ಬೆಂದು
ಕುದಿವೆದೆಗೆ ತಣ್ಪೀಯಲೆನೆ
ಎಳೆತಂದು ಕ್ಷೀರಾಬ್ಧಿಯೊಳದ್ದಿ
ಜೀವನವೈಸೆ ಅಮೃತ ಸಿಂಧು !

ಹಿಂಜದರಳೆಯ ಹಿಂಡೋ ? ಮಂಜಿನ
ಐರಾವತಗಳೋ ? ಬ್ರಹ್ಮನ ಸಾಕ್ಷಾತ್ಕಾರವೋ ?
ಎನೆ ಬಾನಿನಂಗಣದ ನೀಲಿಯಲಿ ನಲಿದಾಡುತಿವೆ,
ಬೆಳ್ಳಿಯ ಮುಗಿಲುಗಳ ಸುರ ಸುಂದರ ದಂಡು !
ದೃಷ್ಟಿಯ ಕಕ್ಷೆಯಲಾಡಿ ಶಾಂತಿ ಮಂತ್ರವ ಬಿತ್ತಿ
ನಿಂದೆನು ನಾನು ಶಿಲಾ ಮೂರ್ತಿಯ ಹೋಲಿ !

ಧನ್ಯವೆತ್ತೆ ನಾನಿಂದು ಸೌಂದರ್ಯ ಲೋಭದಿಂದೆ
ಉದಯ ರವಿಯ ದರುಶನಕೆಂದಿಲ್ಲಿಗೈತಂದು !
ಅತುಲ ಪ್ರೇಮದಿ ಅಮಿತ ನೇಮದಿ
ಹೃದಯ ಮಂದಾರ ದಲ ದಲ ದಲ ಅರಳಿ
ಆತ್ಮಾನಂದದಲಿ ಮುಳುಮುಳುಗಿ ತೇಲಿತು
ಎನ್ನ ಮನದೈಸಿರಿ ತಾಯಿ ಗುರು ಕೃಪೆಯಲಿ !

ನೌಖಲಿ

ನೌಖಲಿ! ನೌಖಲಿ! ಜೆಶೆಗೆಟ್ಟ ಹೆಸರು
ಕೆನ್ನೀರೋಕುಳಿಯಲಿ ಮಿಾಯುತಿರಲ್
ಭೀಷಣ ಪಥದಲಿ ಅಳುಕದಿನಿತೂ
ನಡೆದನೇಕಾಂಗಿ ಗಾಂಧೀಮಹಾತ್ಮಾ!

ಏಂ ಕ್ರೌರ್ಯ? ಏಂ ಪೈಶಾಚಿಕೆ? ಏಂ ಕಟು
ಮತಿ? ಚೀರುದನಿ ಮೊಳಗುತಿರೆ, ನೆತ್ತರು
ಚಿಮ್ಮುತಲಿರೆ ಸುರಿದ ನಿಡುಗಂಬನಿಯು
ಮಡುವಾಗಿರೆ ಕೊಲೆ ಮನವೆಂತು ಸಂತು?

ಕಲ್ಲು ಕತ್ತಿ ಕೋವಿಯ ಹಿಡಿದು, ಚಂಡ
ಮುಂಡಗಳಂ ಚೆಂಡಾಡಿ ಕಿಚ್ಚಿಕ್ಕಿ
ಸಿಕ್ಕಿದವರ ಸಿಗಿದು ತೋರಣಗಟ್ಟಿ
ಹೆಂಗಳೆಯರಗೆಡಿಸಿ ಕಡು ರೋಷದಲಿ!

ಮಾನವ ದಾನವನೆತ್ತು ರಕ್ಷಕನೆ
ಭಕ್ಷಕನಾಗೆ ರುದ್ರನುರಿಗಣ್ಣು
ತೆರೆಯಲಿ ಬಿಡಲಿ ಭಾರತ ಜನನಿ ತಾ
ಮರೆಯುಳಾವತ್ತಂ ಇನ್ನೆಂದೆಂದು !

ಹಕ್ಕಿಗಳುಲಿವ ತರತರ ನಿಸ್ವನವು
ಮಂದಮಾರುತನ ನಿಡುಸುಯ್ಲು ಮಿಡಿವ
ತನನತಾನವೀ ನೌಖಲಿ ! ಅಂದೊಡೆ
ಚೆಲ್ಲಿದಾ ನೆತ್ತರುಸಿರೇಂ ಹೇಳಾ !

ದುಃಖ ತಾಪದಿ ನಡೆಯೆ ಮಹಾತ್ಮಾ
ಕಡುಗತ್ತಿ ಬಿಸುಡಿ ಮನೆಮನೆಯ ಮಂದಿ
ಓಡಿಬಂದು ಕಾಲ್ಪಿಡಿದು ತಪ್ಪೊಪ್ಪಿ
ಪ್ರಮಾಣಗೈದರಲ್ತಾ ಭಕುತಿಯಲಿ !

ಕಗ್ಗತ್ತಲೆಯಲಿ ದೀಪ ತಂದಂತೆ
ಬಾಪುವಿನಾಗಮನ ಬೆಳಗಿಸಿತಲ್ಲಿ
ಜನತತಿಯ ಹೃದಯ ಬನ ದಳ್ಳುರಿಯಲಿ
ದಿವ್ಯ ಸತ್ಯಾತ್ಮ ಜ್ಯೋತಿಯುಂ ಕಣಾ !

ಈ ಮತಿ.... ...ಈ ಅಕ್ಷಿ!

ಎನಿತು ಕೃಪೆ; ಎನಿತು ಘನ!
ಈ ಮತಿ........ಈ ಅಕ್ಷಿ!
ಭಗವಂತನ ಕೃಪಾಕಟಾಕ್ಷ ಘನಿಸಿರಲಿಲ್ಲಿ
ಎನಿತೆನಿತು ಜನ್ಮಗಳ ಪುಣ್ಯ ಸಂಸರ್ಗ ಹೇಳಾ,
ಸುರ ಸುಂದರವೀ ಉದ್ಯಾನವನಂ!
ಹಸುರಿಂ ಪೂವಿಗೆ, ಪೂವಿಂ ಹಸುರಿಗೆ
ಚಲಿಸುವ ಚಿತ್‌ಶ್ರೀಯಲಿ ಅಕ್ಷಿಯು ಮಧುರ ಭೇಟಿ!
ನೋಡಿದನಿತೂ ಘನಿಸುತಿದೆ ಕಣ್;
ಭಾವಿಸಿದನಿತೂ ಅರಳುತಿದೆ ಚಿತ್;
ಧ್ಯಾನಿಸಿದನಿತೂ ಪುಟಿದೇಳುತಿದೆ ಚೇತನ.
ಜಗದಂಬೆಯು ಪದತಲಕೆ
ಅಖಿಲ ಪುಷ್ಪದಾರತಿಯೆತ್ತಿ
ತಲೆ ಮಣಿದು ಕರವಂ ಜೋಡಿಸಿ
ಶರಣು ಶರಣೆನ್ನುವೀ ಚೇತನರತಿ
ಪಡೆದಿರಲಕ್ಷಿಯು ಸಹಕಾರ
ಕಂಡೆನೆ ಸೃಷ್ಟಿಯ ಸಾಕ್ಷಾತ್ಕಾರ!
ಅಕ್ಷಿಮತಿಗಳ ಪವಿತ್ರ ಸಂಗಮು
ತಾನಾದುದು ಸೌಭಾಗ್ಯ ಸೃಷ್ಟಿ ಸೌಂದರ್ಯ ಸಾರ್ಥಕ್ಯ.
ಎನಿತು ಕೃಪೆ; ಎನಿತು ಘನ
ಈ ಮತಿ........ಈ ಅಕ್ಷಿ
ಎನಿತೆನಿತು ಜನ್ಮಗಳ ಪುಣ್ಯ ಸಂಸರ್ಗ ಹೇಳಾ!

ಹೇ ಮಮತಾಯೆ, ಅಜಜಾಯೆ !

ನಿನ್ನಡಿದಾವರೆಯ ರೇಣು ತಳದಲಿ
ಮಧುವನರಸುವ ಮರಿದುಂಬಿಯು ನಾನು !
ಹೇ ಮಮ ತಾಯೆ, ಅಜ ಜಾಯೆ !
ಕಾಮಕ್ಷುಧೆಯ ಕತ್ತಲೆವೀಡಿನಲಿ
ಬೀಳುತೇಳುತಿರಲ್, ನಾನನ್ಯೆಯೊಲ್
ನಡೆದೆ ಕಡು ಸಂಕಟದ ಸುಯ್ಲು ಹರಿಸಿ
ನಿನ್ನಡಿಯ ಜಾಡ ಹಿಡಿದು ಹೇ ತಾಯೆ !
ಹಾದಿಯಲೆಲ್ಲೆಲ್ಲಿಯು ಎಣೆಯಿಲ್ಲದ
ದುಃಖ ಹರಿದಾಡೆ ಕಾಲ್ತೊಡಕಾಗಿ
ಗಮ್ಯಸ್ಥಾನವನಿಲ್ಲಿ ಕಾಂಬುದೆಂತು ?
ಹೇ ಮಮ ತಾಯೆ, ಅಜಜಾಯೆ !
ಇದುವರೆಗಂ ನಿನ್ನನರಸುತ ತೊಳಲಿ
ಬಳಲಿದೆನಗೆ ದಯೆದೋರೌ ಕೃಪಾಂಗಿ !
ಬಾಳಟವಿಯು ದುರ್ದರ್ಶವಾದೀ ನಿಜ
ಕಳ್ತಳೆಯ ತೆರೆಹರಿದು ಮುನ್ನಡೆಯಿಸು
ನಿನ್ನಯ ಚರಣದಾಸರ ದಾಸಿಯುಂ
ಹೇ ಮಮ ತಾಯೆ, ಅಜ ಜಾಯೆ !

ಕಾವ್ಯ

ಮೃತ್ ಕುಂಡದಲಿ ಅರಳುತಿರೆ ಪುಷ್ಪ ಕಾವ್ಯ
ಹೃತ್ ಕುಂಡದಲಿ ಅರಳುತಿದೆ ನವ್ಯಕಾವ್ಯ !
ಮನವ ಮುಸುಗಿರೆ ದೇವನೆಂಬ ದಿವ್ಯ ಕಾವ್ಯ
ಮುಗುಳ್ವ ತನನ ತಾನವೀ ಜಗಚ್ಛ್ರಾವ್ಯ ಕಾವ್ಯ !

ನಿಮ್ಮಯ ಅವತರಣಕೆ ಜಗದ ಭಿತ್ತಿ ಕಾವ್ಯ
ಸುಪಾತ್ರವೆನೆ ಈ ರಸೆಯುಡಿಯಾ ಕೂಸೆಮ ಕಾವ್ಯ !
ಕವಿ ಹೃದಯ ಕಮಲದ ಭಾವರಸ ಕಾವ್ಯ
ಎನಿತು ಶ್ರಾವ್ಯ ? ಅಹಃ ಎನಿತೆನಿತು ಸಂಭಾವ್ಯ !

ಪುಷ್ಪ ಲೋಕದಲ್ಲಿ........!

ಓಹೋ! ನೋಡಾ ಹಸುರು ಬನದಿ
ಹೂವು ಅರಳಿ ನಲಿಯುತಲಿರೆ
ನೋಡಲೆನಿತು ಮಧುರ?
ಎಲ್ಲಿ ನೋಡಿದರಲ್ಲಿ
ಹೂವು! ಹೂವು! ಹೂವು!
ವರ್ಣವರ್ಣ ಹೊಂಚಿ
ಎಳೆ ಬಿಸಿಲಲಿ ಮಿಂಚಿ
ಸುಗಂಧ ಸೌರಭ ಸೂಸಿ
ಮಲರಲೆಯ ಲೀಲೆಯಲಿ
ಒಲಿದು ತಲೆಯ ತೂಗೆ
ಅರಳುತಲಿದೆ ಸೊಗದ ಕಾವು!
ಮನವು ಮೆಚ್ಚಿ ಹೃದಯ ಬಿಚ್ಚಿ
ಅತ್ತಲಿತ್ತ ನೋಡುತಲಿರೆ
ಮಿದುಳ ಹೂವು ಅರಳಿ
ಎದೆಯ ಬನದ ಪಕ್ಷಿ

ಕೂಜನ ಗೈಯ್ಯೆ
ನವಸ್ಫೂರ್ತಿ ತುಂಬಿ
ಹೂವು! ಹೂವು! ಹೂವು!
ವರ್ಣದೊಳಾನು ವರ್ಣ!
ಹೂವಿನೊಳಾನು ಹೂವು!
ಹಸುರಿನೊಳಾನು ಹಸುರು!
ತನ್ನತನವೇ ಕಳೆದು
ಹೂಗಂಪಿನ ಪೆಂಪಿನಲಿ
ತೇಲಿ! ತೇಲಿ! ತೇಲಿ!
ಭಾವ ಸಮಾಧಿಯಲಿ ಮುಳುಗಿ
ಕಾಲ ದೇಶವ ದಾಂಟಿ
ರಸಾಮೃತವೀಂಟಿ
ನಾನು! ನಾನು! ನಾನು!
ಅಳಿದು ಧ್ವಂಸ ಹೊಂದಿ
ಹೂವು! ಹೂವು! ಹೂವು!
ಹೂವು! ಹೂವು!
ಹೂ...........ವು!

ಕವಿ ಹೃದಯ... ... !

ದಟ್ಟಡವಿಯಲಿ ಜಗ್ಗದಿನಿತು ಸುತ್ತಿ ಬಂದಿಹೆ
ಬೆಟ್ಟವನೇರಿ ಸರಾಗದಿಂ ಇಳಿದಿಹೆ
ಗಟ್ಟಿ ಮಂಜಿನಲಿ ಅಳುಕದಲೆದಲೆದು ಬಂದಿಹೆ
ನೆಟ್ಟ ಕಿಡಿ ನೋಟಕೆ ಮುದವಂ ನೀಡಿ!

ದುರ್ಗಮವೀ ಕವಿಕಾವ್ಯ ಹೃದಯ ನಿಕುಂಜ;
ಕಗ್ಗತ್ತಲೆಯ ಕಲ್ಲು ಮುಳ್ಳಿನ ಪಥ,
ಭಗವಂತನ ದಯವಿಲ್ಲದಿರೆ ಕಳೆಯದಯ್ಯಾ
ಜಗದಲಿ ಭವದೀಯ ಭಕ್ತರಿಂಗೆ!

ಕಂಡರಿಯದ ಛಂದಃಪ್ರಾಸವ ನುಂಗಿ ನೊಣೆದು
ಬಂಡುಂಡು ಕಠಿಣ ಶಬ್ದಕೋಶವ
ಕಂಠಪೂರ್ತಿ ಸವಿಯೆ ಶ್ರೀ ಸಾಮಾನ್ಯರಿಂಗೆ
ಆಗದೈ ಮಾಗದೈ ಕವಿ ಕಾವ್ಯನಿಧಿ!

ಬಂದ ಬಂದವರಿಗೆಲ್ಲ ಅಂಗೈ ತೋರುವುದಲ್ಲ ;
ಕಂಡಕಂಡವರೆಲ್ಲ ತವ ಕಂಡಿಯ
ಕಿಂಡಿಯಲಿ ಹಣುಕುವುದಲ್ಲ ; ಬತ್ತಲೆ ಮನದಾ
ಮಂದ ಬುದ್ಧಿಗದು ಸಹ್ಯವೂ ಅಲ್ಲ !

।

ಹರನೊಲಿದು ನಿನಗೀಯೆ ಕಾವ್ಯಶಕ್ತಿ ವರವೆನೆ
ದೂರದಿಂದ ಹಣೆಮಣಿದು ಗಮಿಸಯ್ಯ
ವರಕವಿಯಾ ಹೃದಯ ಗುಹ್ಯ ಗವಿಗಂತರಕೆ
ತೋರುವುದೆದೆ ಬಿಚ್ಚಿ ಪ್ರೇಮಾದರದಿ !

ಶ್ರೀ ಗುರುದೇವ ಬುದ್ಧ

ಏಕಿಂತಲೆಯುವೆ ಹೇ ಮೂಢಮನಾ !
ಬಿಡು ಬಿಡು ಚಪಲವ ಹೇ ಮೂಢಮನಾ !

ನನ್ನನೇಕಿಂತು ಕಾಡುವೆ ನೀ ಆಸೆಯ
ದಳ್ಳುರಿಯಲಿ ಸಿಲ್ಕಿ ಹೇ ಮೂರ್ಖಮನಾ !

ಸುಖವ ನೆಚ್ಚಿ ನೂಕದಿರೆನ್ನನು ಕಡು
ನರಕದಾ ಮೋಹ ವಿಶೇಷಕೆ ನೀನೆಲೆ !

ದೃಗ್ವಿಷಯದಾಚೆ ಚಲಿಸಿ ತಾ ಬಂಡುಂಡು
ನುಂಡಿಸಿಹ ನೋಡಾ ಗುರುದೇವ ಬುದ್ಧ !

ತಣ್ಣನೆಯ ತಣ್ಣೆಳಲು ಸೂಸುತ ಹಸುರು
ಹಬ್ಬಿಹ ಹೆಮ್ಮರವೆನಿತು ಹರುಷಮತ್ತ ?

ವನಕೋಗಿಲೆ ಕಾಮಳ್ಳಿ ಕಾಜಾಣ ಗಿ-
ಳಿವಿಂಡುಗಳ್ ಕೊರಳೆತ್ತಿ ಹಾಡುತಲಿವೆ.

ನೋಡು! ಕಣ್ತೆರೆದು ಮಂಗಳ ದೃಷ್ಟಿಯಲಿ
ತಲೆಬಾಗು ನೀ ಸಜ್ಜನ ವಿಧೇಯದಲಿ!

ಬ್ರಹ್ಮಚರ್ಯ ಶೀತಲೋಜಸ್ವಿತೆಯಾ
ಕಮನೀಯ ಕಾಂತಿ ಕಣ್ತಣಿಯದ ಶಾಂತಿ!

ಧವಲ ದೇಹಚ್ಛವಿಯ ಅನಂತತಾ
ಶೋಭೆಯೀ ದೇವ ಮಾನಸ್ಯ ಪ್ರಭೆ!

ರಜನಿಯಾಳ್ದಪ ನಿಬ್ಬಯಲಿಗಿಳಿದವೊಲ್
ಚಂದ್ರಶೀಲ ಶ್ರೀಗುರುದೇವ ಬುದ್ಧ!

ಬಂಧುರ ಬನ !

ಓ ಬನ್ನಿ ಬನ್ನಿ ಬಾನಾಡಿಗಳೇ !
ಪಕ್ಷಿ ನೋಟವ ಬೀರಿ ಮನಃಪೂರ್ತಿ ಸವಿಯೆ
ಗಗನದೇಣಿಯ ಮೆಲ್ಲಮೆಲ್ಲನಿಳಿದು ಬನ್ನಿ !
ಪ್ರೇಮಾದರದಿ ತನ್ನಿ ತವ ಅಮೃತ ಕುಂಭ !

ಕೆಂಪು, ಹಳದಿ, ನೀಲಿ, ಪಚ್ಚ,
ವರ್ಣವರ್ಣದಿಂದ ಕೂಡಿ
ಚೆಲುವ ಚೆಲ್ವ ದಿವ್ಯ ನೋಟ ;
ನಳನಳಿಪ ನವ್ಯ ಹೂದೋಟ !

ಸೀಬೆ, ಚಕ್ಕೋತ, ರಾಮಫಲ, ತೆಂಗು, ಮಾವು, ಹಲಸು,
ಮೇಣಿಲ್ಲಿ ಸೇವಂತಿಗೆ ಸಾಲು, ಅಲ್ಲಿ ಹೊಂಗುಲಾಬಿ ಪಂಕ್ತಿ
ದುಂಡುಮಲ್ಲಿಗೆ, ದಾಸವಾಳ, ಕಾಶಿತುಂಬೆ, ರಾತ್ರಿರಾಣಿ
ಹೂಗೈ ತೂಗಿ ಸ್ವಾಗತವೀಯುತಿವೆ ಬಲುಮೆಯಿಂ ನಿಮಗೆ !

ಕೋಗಿಲೆ ಕಲವಿಂಕಾದಿ
ಕಮನೀಯ ಕೂಜನ
ಕೇತಕೆ ಪುಷ್ಪಾದಿಗಳ
ಸುಗಂಧಿತ ಗಂಧ

ಬಂಧುರ ಬನ ಸುಂದರ ಚಣ ತುಂಬಿದ ಮನ
ಚೆಲ್ಲಿ ಸೂಸುವೀ ಮಧುರಾಮೃತ ಮಿಗಿಲಲ್ತೆ
ವರ ಭುವಿಯಲಿ ಇಂದ್ರನ ನಂದನವನಕಿಂ ?
ಸಟೆಯೆನ್ನಿ ದಿವ್ಯವೆನ್ನಿ ಉತ್ಪ್ರೇಕ್ಷೆಯೆನ್ನಿ
ಏನಾದರಿರಲಿ, ಹೊಂದಲೀ ಪುಷ್ಪಿತ ಪುಷ್ಪವನವಂ
ಫಲಿತ ಫಲದೋಟವಂ ನಾನಮಿತ ಪುಣ್ಯಾವನಿ !

ಉಜ್ವಲೋಜ್ವಲ ರೈತಜ್ಯೋತಿ !

ಸಾಲು ಸಾಲಾಗಿ ಮೂಡಿ ಬಹ
ಕುಳದ ರುದ್ರಗೆರೆಯು ನೋಡು !
ಹೊಲದ ನೇತಾ ಬರೆಯುತಿಹ
ನಾಡ ಹಣೆಯ ಬರೆಹ ತಿದ್ದಿತಿದ್ದಿ !

ಉಳುವ ರೈತನೆ ರಾಷ್ಟ್ರ ಶಕ್ತಿ !
ನೇಗಿಲದುವೆ ಬೆನ್ನಮೂಳೆ !
ನಿತ್ಯ ದುಡಿವ ದಿಶೆಯಲಿ
ಪ್ರಧಾನಿಗೇನು ಕಡಿಮೆಯೇ
ಈ ಭದ್ರ ನೇಗಿಲ ನೇತಾ ?

ಉಸಿರದು ಹೆಸರಿಗೆ ನಿಜಪಾಯ ;
ಒಡಲದು ಉಸಿರಿಗೆ ಪ್ರಾಣಾಯ ;
ರೈತನ ಕುಳ ಬಲವೆಮ್ಮ ಭುಕ್ತಿ
ರೈತನ ತೋಳ್ಬಲವೆಮ್ಮ ಮುಕ್ತಿ !
ರೈತನ ದಯೆಯೊಳಿಹುದೆಮ್ಮ ರಕ್ಷೆ !

ಹೆಸರಿನ ಗೀಳಿಲ್ಲದ ಅವನೆ
ನಾಡದೇವಿಯ ಉಸಿರು ;
ಅನವರತ ಹೊತ್ತ ಹಸುರು ;
ಉರಿಯಲಿ ನಿತ್ಯ ನಾಡಗುಡಿಯಲಿ
ಉಜ್ವಲೋಜ್ವಲ ರೈತ ಜ್ಯೋತಿ !

ಓ ಶ್ರೀ ಹರಿಯೆ !

ಈ ತನು ಮನಗಳು ನಿನ್ನವು
ಶಕ್ತಿ ಕಣಕಣವು ನಿನ್ನದು
ನಾನು ನಾನೆಂಬ ಅತೀವ
ವ್ಯರ್ಥಾಲಾಪವು ಎನ್ನದು
ಓ ಶ್ರೀ ಹರಿಯೆ !

ನಿನ್ನ ಮರೆತು ನಡೆದರೆ ಈ
ಜಗದಿ ಬದುಕಲಳವೆ ಸ್ವಾಮಿ ?
ನೀನೆ ದೀಪ ನೀನೆ ಶಕ್ತಿ
ನೀ ಕೈಹಿಡಿದು ನಡೆಸೆನ್ನ
ಓ ಶ್ರೀ ಹರಿಯೆ !

ಸೋದರಿಗೆ–

"ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವ್ವನೇ |
ಪುತ್ರೋ ರಕ್ಷತಿ ವಾರ್ಧಕ್ಯೇ ನಸ್ತ್ರೀ ಸ್ವಾತಂತ್ರ್ಯ ಮರ್ಹತಿ || "

ಕಾಲದೇಶಗಳಾಚೆಯ ಸಾಮಾಜಿಕ ರೂಪುರೇಷೆ
ನಿತ್ಯನೂತನ ಶೈಲಿಯಲಿನ್ನೂ ಮೆರೆದಿದೆ ನೋಡಾ !
ಸ್ವಸುಖ ಸಂಪ್ರಾಪ್ತಿಗೆನೆ ಕಾಪಿಡೆ ಪುರುಷತತಿ
ತವ ಭೀಮಶಕ್ತಿಯ ಪ್ರಾಕಾರದಲಿ, ಪಟವೃಕ್ಷ
ಪಚ್ಚ ಪಸುರಪ್ಪಿ ಕವಲೊಡೆದು ಶಾಂತಿಯ ಶೈತ್ಯದ
ನೋಂಪಿನಲಿ ಬರೆದಿದೆ ಮನೆಮನೆಯ ಪ್ರಭಾತ ಕಾವ್ಯಂ !

ಅತೀತ ಯುಗದ ಅತೀತ ವಾಙ್ಮನ ಅನೈತಿಕತಾ
ಪ್ರಚಂಡ ಪ್ರವಾಹದಿ ಸಿಲ್ಕಿ ಶೋಕ ವ್ಯಾಕುಲತಾ
ಭಾರದಲಿ ಕಿಂಕುರ್ವಾಣತೆಯು ತುಂಬಿ ಹರಿಯಲ್,
ಬಳಬಳ ವಸರುವ ಒಡಲುರಿಯ ನಿಡುಗಂಬನಿಗಳಲಿ
ದಿವ್ಯಾರುಣಜ್ಯೋತಿ ಮಾರ್ಪೊಳೆಯೆ ತರತರದ ನುಣ್ಗದಪು
ಜ್ವಲಿಸುತಿವೆ ವಜ್ರಲೇಪವಂ ಒತ್ತಿ ಪೂಸಿದವೊಲ್ !

ನಾಗರಿಕ ರಾಷ್ಟ್ರದ ನಾಗರಿಕ ಚೇತನ ಶ್ರೀ ವಿಜಯ
ತೋಷದಿಂ ವಸಂತೋದಯವಾಚರಿಸುತಿರಲ್ ಭವ್ಯ
ಗಗನಚುಂಬೀ ಸರಸ್ವತಿ ಮಂದಿರಗಳಂ ನಿರ್ಮಿಸಿ
ನಿತ್ಯ ವರಪೂಜೆ ನಡೆಸುತಲಿ ಮತಿ ಭ್ರಾಂತಿಯೋ ಎನೆ
ಜೀವನ ಪಥ ಹರಿದಿದೆ ಪುರಾತನ ಸೂತ್ರ ಸಾರಗಳ
ಪರಿಪಾಠದಿ ನಿತ್ಯದೇಕಕಂಠ ಜಯಧ್ವನಿಗೈದು !

ಭಾರತದ ಭವ್ಯ ಭವಿತವ್ಯ ಬೆಳಗುತಿರಲಿಂದು
ಅಸಮ ಸ್ಫೂರ್ತಿಯುತ ಉಜ್ವಲೋಜ್ವಲ ನಾರೀಮಣಿಯ
ಪೂರ್ಣಪ್ರಜ್ಞೆಯ ಪರಿಜ್ಞಾನದಲಿ ! ಅಖಿಲ ಸ್ತ್ರೀಗಣ
ಜೀವನ ವಿಪಿನದಿ ಕಡು ಕಳ್ತಳೆಯ ಶಿಥಿಲ ಪಂಥದ
ಕಮನೀಯ ಕಠೋರ ಸ್ವರ್ಣಜಾಲದಲಿ ಸೆರೆಸಿಲ್ಕಿನ್ನೂ
ಅಲೆಯುತಿದೆ ಕುರಿ ಮಂದೆಯ ಹಸುರಿನೊಲ್ಮೆಯ ತಾ ಹೋಲಿ !

ಓ ಪೂಜ್ಯ ಗುರುಗಳೇ !

ಎಲ್ಲ ಅಡೆತಡೆಯ ಕಿತ್ತೊಗೆದು
ಬನ್ನಿ ಬನ್ನಿ
ಓ ಪೂಜ್ಯ ಗುರುಗಳೇ !
ಬೀಳಲಿ ನಿಮ್ಮ
ಪದ ಧೂಲಿ ಎನ್ನ ಹೃದಯ
ನಿಕುಂಜದಲಿ
ಜನುಮ ಜನುಮಗಳಿಂದ
ಹೊಂದಿ ಬಂದ
ಘನ ತಮೋ ತಿಮಿರ ತೊಲಗಿ
ಹೃತ್ಕಮಲ
ಅರಳಿ ಬೆಳಗೆ ದಿವ್ಯದೀಪ್ತಿ !
ಬನ್ನಿ ಬನ್ನಿ
ಓ ಪೂಜ್ಯ ಗುರುಗಳೇ !

‘ ಅಹಂ ಬ್ರಹ್ಮಾಸ್ಮಿ ’

ಶ್ರೀರಾಮಕೃಷ್ಣ ಪರಮಹಂಸ ಗುರುದೇವಂ
ಶಿಷ್ಯರಿಗೆ ಅದ್ವೈತವಂ ಉಪದೇಶಿಸುತಲಿ
‘ ಅಹಂ ಬ್ರಹ್ಮಾಸ್ಮಿ’ ‘ ಎಲ್ಲವೂ ನಾರಾಯಣನ
ಸ್ವರೂಪ ’ ಮೆನೆ ಮನವಂ ಮಹೋದಯದೊಳದ್ದಿ !
ಓರ್ವ ನಸು ಪಾಂಡಿತ್ಯವೊಡೆದ ಶಿಷ್ಯಂ ತನಗೆ
ತಾನೆಂದಂ ‘ ಅಹಂ ಬ್ರಹ್ಮಾಸ್ಮಿ’ ‘ ಅಹಂ ಬ್ರಹ್ಮಾಸ್ಮಿ’
ಒಡನೆ ತನುಮನಗಳ್ ಪುಟಿದುವು ಸಗ್ಗದೇಣಿಗೆ !
ಆತ್ಮಾನಂದದಿಂದ ತಾ ಬ್ರಹ್ಮಮಯಮಪ್ಪಿ.
ಒರ್ಮೆ ಆ ಶಿಷ್ಯಂ ರಾಜಪಥದಲಿ ನಡೆಯೆ
ಎದುರಿಂ ಗಾಬರಿವೊಡೆದ ಬಹುಮಂದಿಯು ಓಡಿ
ಬರುತಿರಲ್ ಅಚ್ಚರಿಯಿಂ ಕೇಳ್ದನವರನಿಂತು,
‘ ಏಕಿಂತು ಓಡಿ ಬರುತ್ತಿರುವಿರಿ ಕಡು ಭೀತಿಯಿಂ ?
ಆತಂಕಮೇನಿದು ಪೇಳಿರೈ ಅಣ್ಣಗಳಿರ ? ’
ಕಂಗಾಲಾಗಿ ಜೀವ ಸಿಡಿದು ಹಾರ್ವ ತೆರದಿ
ಕಣ್ಣರಳಿಸಿ ಏದುಸಿರಿಂ ಬಿತ್ತರಿಸಿದರವರು,
“ ದೊರೆಯಾನೆ ಮದಿಸಿ ರೋಷದಿಂ ನುರ್ಗಿ ಬರುತಿದೆ
ಇತ್ತಲೆ ; ಸಿಕ್ಕಿದೊಡಂ ಸಗ್ಗವೇ ಗತಿ ಕಣಾ ! ”

ಅಷ್ಟೆನೆ ನಿಲ್ಲದೋಡಿದರೆಲ್ಲರು. ಶಿಷ್ಯ ನಕ್ಕು
"ಏನು ಅರಿಯದ ಅಜ್ಞಾನಿಗಳ್ ! ಸರ್ವ ವಸ್ತು
ಆ ನಾರಾಯಣ ಸ್ವರೂಪವೆ ಆಗಿರಲ್ಕೆ
ಇಸ್ಯಾತರ ಭಯವಯ್ಯ ? ಗಜರಾಜ ರೂಪಿ
ನಾರಾಯಣ ನರ ನಾರಾಯಣನೆಂತು ಘಾಸಿ
ಗೊಳಿಪಂ ? " ಎನುತ ಮಂದ ಗತಿಯಲಿ ನಡೆದಂ
ಅದೆ ಮಾರ್ಗವ ಪಿಡಿದು. ಅಷ್ಟರೊಳ್ ಮದಿಸಿದಾನೆ
ಇತ್ತಲೆ ನುಗ್ಗಿ ಬಂದುದು ! ಮೇಲೆ ಕುಳಿತಿರ್ದಾ
ಮಾವಟಿಗಂ ಅಂಕುಶವಂ ಬಿಗಿವಿಡಿದು ಚುಚ್ಚಿ
ಏರು ದನಿಯಲಿ ಕೂಗಿದಂ " ಮದವೇರಿದಾನೆ !
ನಿಲ್ಲದೆ ಓಡಯ್ಯಾ, ಓಡು ! " ಕೂಗು ಕೇಳಿತು-
ಆನೆ ದೌಡಾಯಿಸಿ ಬರುತಿದೆ ! ಆದೊಡೇಂ ಶಿಷ್ಯ
ಬೆದರಲಿಲ್ಲ ! ನಡೆಯುತಿರ್ದ ಒಂದೇ ಗತಿಯಲಿ !
ಮುನ್ನುಗ್ಗಿದಾನೆಯು ಕಡುರೋಷದಿಂದವನಂ
ಪಿಡಿದೆತ್ತಿ ದೂರಕ್ಕೊಗೆದುವೋಗೆ, ಬಿದ್ದಲ್ಲಿ
ಮೈಯ್ಯ ಮೂಳೆಗಳ್ ನಿಟಿನಿಟಿ ಮುರಿದಂತಾಗಲ್
ನರಳುತ ಶಿಷ್ಯಂ ಬೆಚ್ಚನೆ ಬಿಸಿಲಲಿ ಬೇಯುತಿರೆ
ಪಾಂಥರ್ ಮರುಗಿ ಉಪಚರಿಸಲ್ ಮೆಲ್ಲನೆದ್ದು
ನೋವಿನತಿ ಗಾವರದಿಂ ಆಶ್ರಮಕಯ್ತಂದು

ಗುರುದೇವಂಗೆ ನುಡಿದನಿಂತು "ಇಂದೆನ್ನಗತಿ
ಮುಗಿದಿತ್ತು 'ಅಹಂ ಬ್ರಹ್ಮಾಸ್ಮಿ' ನೇಮದಿಂದೆ!
ಸರ್ವಸ್ವವೂ ನಾರಾಯಣ ಸ್ವರೂಪವೆಂದಿರಿ,
ಗಜರಾಜಂ ನಾರಾಯಣನಾಗಿರ್ದೊಡೆಂತು
ಘಾಸಿಗೊಳಿಪನೆಂತೀ ನರನಾರಾಯಣನಂ,
ಗುರುದೇವ?" ವಿಷಯ ತಿಳಿದ ಬಳಿಕಂ ಗುರುವರಂ
ಮುಗುಳ್ನಕ್ಕು "ಅಯ್ಯಾ, ಆನೆಯೂ ನಾರಾಯಣ;
ನೀನೂ ನಾರಾಯಣ ಎನೆ ತಪ್ಪಲ್ಲ. ಆನೆ
ನಾರಾಯಣ ಮದಿಸಿದೆ ನರನಾರಾಯಣನೇ
ದೂರ ಓಡೆಂದ ಮಾವುತ ನಾರಾಯಣನಂ
ಮರೆತೆಯೇಕೆ? ಅರೆ ಪಾಂಡಿತ್ಯ ಅಪಾಯಕಾರಿ!
ಇನ್ನಾದೊಡಂ ಉಪದೇಶಾರ್ಥವಂ ನೀನು
ಸಂಪೂರ್ಣ ಗ್ರಹಿಸೈ" ಎನೆ ಅನುನಯದಿಂ ದೇವ.
ತನ್ನ ಜ್ಞಾನಕೆ ತಾ ನಾಚಿ ಕರ ಜೋಡಿಸಿದಂ
ಆ ಶಿಷ್ಯವರೇಣ್ಯಂ!

ಸಾಯುಜ್ಯಗತಿ

ದೇವನೆಂಬುದೆ ಸತ್ಯ ! ದೇವನೆಂಬುದೆ ನಿತ್ಯ !
ಜೀವನ ರಥಕೆಂದೂ ದೇವನೆಂಬುದೆ ಪಥ !
ಮುಂದಿಡುವ ಹೆಜ್ಜೆಯಲಿ ಮುಗುಳ್ದಲಿವೆನು ದೇವ,
ನಿನ್ನ ನೆನೆನೆನೆದು ಪ್ರತಿದಿನ ಪರಮೇಕಾಂತದಿ
ಪ್ರಾಸವಿಲ್ಲದ ಪದ್ಯ ! ಅರ್ಥವಿಲ್ಲದ ಗದ್ಯ !
ಎಂತಿರಲಿ ಲಜ್ಜೆಬಿಟ್ಟು ಮನಶ್ಶಾಂತಿಗೆಂದು
ನಿತ್ಯ ಉಲಿವೆ ಕಣಾ ! ತವ ಪೂಜೆಯ ವರ ನೇಮದಿ
ನಿನಗೆಂದೆ ಪರಿವ ಅಕ್ಷರಕ್ಷರಂ ತಪವಲ್ತೆ
ಈ ಜನಕೋಟಿಯ ಗಜಿಬಿಜಿ ಸಮುದ್ರದಿ ಗಡಾ !
ನೀನೊಪ್ಪುವೆಯಾದೊಡೆ ಒಪ್ಪು, ಇಲ್ಲದೊಡೆ ಬಿಡು !
ಹೆಜ್ಜೆಹೆಜ್ಜೆಗಳು ಮುಂದರಿದೊಡೆ ಸಾಕೆನಗೆ
ದೂರ ಚಿರಂತನ ಸುಂದರ ಸಾಯುಜ್ಯ ಗತಿಗೆ !

Sea Weed

ಜೀವನ ಲಾಲಸೆ ನೀಡಿರೆ ಭರವಸೆ ಭವ್ಯ ಭವಿ–
ತವ್ಯಕೆನೆ ಸಾಗುತಿದೆ ಜೀವನ–ಈ ಬರಿ ಜೀವನ!
ಮುತ್ತಿನಾಸೆಯಲಿ ಮತ್ತೆ ಮತ್ತೆ ತೀರ ಮುಳುಗುವರ
ತೆರದಿ ನಾನಲೆದಿಹೆನೊ ಈ ಭವಸಾಗರ ತಳದಿ.
ಕೈಯಲಿ ನವ್ಯ ಆಶಾದೀಪ್ತಿ! ಎದೆಯಲಿ ಕುಕ್ಕುಟ
ಧೈರ್ಯ! ನಡೆಸುತಿವೆ ಕೊನೆಯರಿಯದಾ ಸಂಕಟಲೀಲೆ!
ಮೊಸಳೆಯ ಕಂಬನಿ ತಿಮಿಂಗಿಲಕ್ಕರೆ ಮುಳ್ಮರಿಯೆ
ಮನಶ್ಶಾಂತಿಗೆ ಬಾಳ್ಗಡಲ ಕರುಳ್ಕುಡಿಯಕ್ಕರೆ ಬಿಗಿದು
ದೂರದಾಶಾಕಿರಣ ಮೂಡಿ ಕರ್ಮಹಿಂಸಾಜ್ವಾಲೆ–
ಗೀಡಾಗಿ ಮನಃಪ್ರಾಣದಿಂದುಲ್ಬಣಿಸಿದ ಜ್ವರವಟ್ಟಿ.
ನಲುನಲುಗಿ ಜೀಸತ್ತು ಬಳಲಿ ಬಾಡಿರುವೆ ಬಾರದಾ
ಶಾಂತಿಯನೊಲಿದು ಹಾರೈಸಿ–ಹಾರೈಸಿ–ಹಾರೈಸಿ!
ಹುಡುಕಿದರೆಲ್ಲಿಯು ಕಾಣದು ಶಾಂತಿ; ಬಯಸಿದರೆಲ್ಲಿಯು
ಬಾರದು ತೃಪ್ತಿ! ಹಾ, ಎದೆಗವಿಯನು ತಿವಿದು ಕೋರೈಸಿ
ಕೆನ್ನೀರಿನಲಿ ಚಿತ್ರಿಸಲ್ ಕಾಂಬುದೈ ನಿಜ ಜೀವನ
ಪ್ರಕಾಂಡ ಕಾಂಡ; ಇಂತಪ್ಪ ದುಃಖ ಭಾರದಲಿ
ಅತೀವ ಮನೋವೇದನೆಯಲಿ ಪ್ರಾಂಜಲೀ ಬದ್ಧಳಪ್ಪಿ
ತಪಂಗೈಯ್ಯೆ ಜೊಗಸೆ ತುಂಬಿತು ಜೀವನ ಪ್ರಸಾದ!
ನೊರೆನೊರೆಯಪ್ಪಿ ಮುಲುಮುಲು ಮುತ್ತಿ ಕೈಗೂಡಲುರೆ
ಅಚ್ಚರಿಯಿಂ ಕಣ್ದೆರೆದು ನೋಡಲಾನು ಕಂಗೊಳಿಸಿತು
Sea Weed!

ಶಿಶಿರ ಸಂಧ್ಯೆ !

ಶುಭ್ರ ಮನೋಹರ ರಾಗಾರುಣತಾನ
ಪೊಮ್ಮಿರಲ್ ಪಡುವಣ ಮಟ್ಟೆಯಲಿ
ಶಿಶಿರ ಸಂಧ್ಯೆಯೀ ದಿವ್ಯ ಸೊಬಗಂ
ಸೂರೆಗೊಂಡು ಮನಮತ್ತೇರೆ ಪೊಳ್ತುರುಳಿ
ಕವಿ ಮನೋಧ್ಯಾನ ನಿರ್ವೇಗರವಿಯ
ರಥಪಥವನಡರಿತು ನಿಶ್ಚಲ ಭಂಗಿಯಲಿ !

ಮಂಜಿನ ತೆರೆ ತುಂಬಿದ ಕಣಿವೆಯಲಿ
ಉರಿವ ವಿದ್ಯುದ್ದೀಪಗಳ ಮಾಲೆ
ಕಡಲೆದೆಯಲಿ ಮಿನುಮಿನುಗುವ
ತಾರಾಳಿಗಳಂದದಿ ಪೊಳೆಪೊಳೆಯೆ
ಮಲೆಯ ಶಿಖರದ್ದೇಶದಲಿ ತಲೆಯೆತ್ತಿ
ಬೆಳ್ಳಿಯ ಸಾಲ್ ಮಣಿಗಳ ಹೋಲಿ !

ನೃತ್ತದು ಚಿತ್ತಾಗಿ ಕಣ್ ಮಿಟುಕಿಸೆ
ಭಾವಾನಂದದೊಳ್ ವರಮತಿ ಮುಳುಗಿ
ಕವನರೂಪೀ ರಸಾಮೃತ ಹರಿಯೆ
ನೆರೆಯುಕ್ಕಿ ತಾ ಮಡುವಾದುದಿಲ್ಲಿ
ಅಪ್ಸರ ವೃಂದವು ಮುಗುಳನೆ ಸೂಸಿ
ಕಿಲಕಿಲ ನಗುನಿನಾದವ ಹರಿಸಿದವೊಲ್ !

ಬಹು ದಿನಗಳಾ ಪ್ರಾರ್ಥನೆ ಫಲಿಸಲ್
ಮನಕೆ ನೆಮ್ಮದಿ ಪರಿಮಳವ ಸೂಸಿ
ಧೈರ್ಯದ ಕಟ್ಟೆಯನೆ ಕಟ್ಟೆ
ಹೃತ್ ಕಳಶದಲಿ ದಿವ್ಯಾಮೃತ ತುಂಬಿ
ಚೇತನ ನವ್ಯವಾಯ್ತು ದರುಶನದಿಂದೆ !
ಮೇಣ್ ನರಜನುಮವಿಂದು ಸಾರ್ಥಕವಾಯ್ತು ಕಣಾ !

ಪೂಜ್ಯರ ಸೇವೆ ಪೂಜೆ ನಿನಗೆ!

ಹೇ ಶಾರದೆ ಚಿರಧವಳೇ!
ನಿನ್ನ ಪೂಜಿಪರು ಪೂಜ್ಯರೆನಗೆ
ಪೂಜ್ಯರ ಸೇವೆ ಪೂಜೆ ನಿನಗೆ!

ನಿನ್ನ ಧ್ಯಾನಿಸಲದುವೆ ಪರೋಪಕಾರ;
ನಿನ್ನ ಪೂಜಿಸುವುದೆ ಸರ್ವೋತ್ತಮ ಕೈಂಕರ್ಯ;
ನಿನ್ನ ನೆನೆದರದುವೆ ಆತ್ಮ ಸಾಕ್ಷಾತ್ಕಾರ;
    ಸಿದ್ಧ ಜೀವಿಯ ಬುದ್ಧ ಮನದ ಸೇವೆ ಧನ್ಯ ಕಣಾ!
    ಶ್ರದ್ಧೆಯಿಹ ಧೃತಿ ಸರ್ವಭೂತ ಹಿತ ಗಡಾ!

ತಾನ ತಾನ ಗೇಯಮಾಗಿ ನಾದರೂಪದಿಂದ
ನಿನ್ನ ಅಡಿಯ ಸೋಂಕಿ ಮಾನಸಲಹರಿಯು
ಹನಿ ಹನಿ ಹನಿ ಚೆಲ್ಲಿ, ಸರ್ವಾತ್ಮ ಸಾಧನೆಯು
    ಸಾಧಿಸಲದುವೆ ಈ ಜೀವನ್ಮುಕ್ತಿ ಕಾಣೋ!
    ಸದ್ ಆಲೋಚನೆಯೆ ಋತ ಚಿತ್ ತಪಸ್ ಮಾಣೋ!

ಪರಮಾರ್ಥ ಚಿಂತನೆ ಸರ್ವಾರ್ಥ ಸಿದ್ಧಿಗೆ ನಾಂದಿ;
ವರ ಚಿದ್ ವಿಭೂತಿಯ ಶ್ರದ್ಧೆ ಚಿರ ನೂತನಮಾಗಿ
ಪರಮ ಕಲ್ಯಾಣ ಪಥವನೆ ಸೇರಿ ಮುನ್ನಡೆಯೆ
    ಆಧ್ಯಾತ್ಮ ಭಾವ ಬಲಿತು ಮಿಗಿಲಪ್ಪಲ್ ಚೇತನ
    ಅಧಿಮಾನಸಕೆಲ್ಲಿನ್ನು ಜರಾಮರಣ ಭಯ ಭೀತಿ!

ಮಲ್ಲಿಕಾ ಕೃತಿಗಳು

		ರೂ. ಪೈ.
ಜೀವನ ಗಂಗಾ	(ಕಾದಂಬರಿ)	10 – 00
ಡಾ॥ ಅಘೋರ	,,	12 – 00
ಡಾ॥ ಕಮಲೇಶ್	,,	12 – 00
ರತ್ನಗರ್ಭಾವಸುಂಧರಾ	(ಕಥಾ ಸಂಕಲನ)	6 – 00
ಬಹುರತ್ನಾವಸುಂಧರಾ	,,	6 – 00
ಲಿಯೋನಾ	,,	6 – 00
ಪೂಜಾವಸಾನಸಮಯೆ........!	(ಕವಿತಾ ಸಂಕಲನ)	4 – 00
ಧ್ಯಾನಾವಸಾನಸಮಯೆ........!	,,	4 – 00
ಗಾನತೀರ್ಥ	,,	6 – 00
ನಾದ ಬಿಂದು	,,	6 – 00
ವಿಜಯಗಾಥ	(ದೇಶಭಕ್ತಿ ಗೀತೆ)	3 – 00

ಸಧ್ಯದಲ್ಲಿಯೇ ಪ್ರಕಟವಾಗಲಿರುವ ಕೃತಿಗಳು

ವಂದೇಮಾತರಂ

(ಕೊಡಗಿನ ರಾಜಕೀಯ ಕ್ಷೇತ್ರ, ಮಿಲಿಟರಿ ಕ್ಷೇತ್ರಗಳನ್ನು ಒಳಗೊಂಡ ಅತ್ಯಂತ ಅಮೋಘವಾದ ಕಾದಂಬರಿ)

ಅನಂತಾನಂತದೆಡೆಗೆ

ಶ್ರೀಮುಖಿ

ಮುಂಬರಲಿರುವ ಕೃತಿಗಳು:

ಶೇಷರತ್ನ, ಶ್ಯಾಂ–ಶ್ಯಾಂತಿ, ಹೇಮ-ಗಂಗಾ,

ಭಗವಾನ್ ಸೂರಿ, ಗೂಢಚಾರ